## ಕರ್ನಾಟಕ ಯಕ್ಷಗಾನ ಅಕಾಡೆಮಿ, ಬೆಂಗಳೂರು

www.karnatakayakshaganaacademy.com

ಪ್ರಾಯೋಜಕತ್ವದಲ್ಲಿ ಪ್ರಕಾಶಿತ


ಯಕ್ಷಗಾನ ಪ್ರಸಂಗ

# ಶ್ರೀಕೃಷ್ಣಗಾರುಡಿ


ಕವಿ

## ಶಿರೂರು ಫಣಿಯಪ್ಪಯ್ಯ



ಅಂತರಜಾಲ ಆವೃತ್ತಿ ಸಹ-ಪ್ರಕಾಶಕರು ಮತ್ತು ಪ್ರಕಾಶನ ನಿರ್ವಾಹಕರು

ಯಕ್ಷವಾಹಿನಿ®

Email: yakshaprasangakosha@gmail.com

Blog: www.yakshaprasangakosha.yakshavahini.com

ಆವೃತ್ತಿ ೧.೦ ಮೇ ೩೦, ೨೦೨೦

ಯಕ್ಷವಾಹಿನಿ®

Email: yakshaprasangakosha@gmail.com, yakshavahini@gmail.com, Blog: www.yakshaprasangakosha.yakshavahini.com


## ಯಕ್ಷವಾಹಿನಿಯ ಯಕ್ಷಪ್ರಸಂಗಕೋಶ ಯೋಜನಾ ಸಮೂಹ

**ಗೌರವಾನ್ವಿತ ಸಂಪಾದಕ ಮಂಡಳಿ:**

ಶ್ರೀಧರ ಡಿ. ಎಸ್. (ಗೌರವಾಧ್ಯಕ್ಷರು), ಗಿಂಡೀಮನೆ ಮೃತ್ಯುಂಜಯ, ಡಾ. ಆನಂದರಾಮ ಉಪಾಧ್ಯ, ದಿನೇಶ ಉಪ್ಪೂರ, ಅಶೋಕ ಮುಂಗಳಿಮನೆ

**ಗೌರವಾನ್ವಿತ ಸಲಹಾ ಮಂಡಳಿ:**

ಅನಂತ ಪದ್ಮನಾಭ ಫಾಟಕ್, ಡಾ. ಪ್ರದೀಪ ಸಾಮಗ, ವಿದುಷಿ ಸುಮಂಗಲಾ ರತ್ನಾಕರ್, ರಾಜಗೋಪಾಲ ಕನ್ಯಾನ, ಶಶಿರಾಜ ಸೋಮಯಾಜಿ, ಅವಿನಾಶ್ ಬೈಪಾಡಿತ್ತಾಯ, ಮಹೇಶ್ ಪದ್ಯಾಣ, ನಾರಾಯಣ ಹೆಬ್ಬಾರ್

**ಕಾರ್ಯಕಾರಿ ಮಂಡಳಿ:**

ರವಿ ಮಡೋಡಿ (ಯೋಜನಾಧ್ಯಕ್ಷ), ಅಶ್ವಿನಿ ಹೊದಲ (ಯೋಜನಾ ಕಾರ್ಯದರ್ಶಿ), ವಿಂಧ್ಯಾಶ್ರೀ ಸೋಮಯಾಜಿ (ಯೋಜನಾ ಸಹಕಾರ್ಯದರ್ಶಿ), ನಟರಾಜ ಉಪಾಧ್ಯ, ಹರಿಕೃಷ್ಣ ಹೊಳ್ಳ, ಕಜೆ ಸುಬ್ರಹ್ಮಣ್ಯ ಭಟ್, ಲ. ನಾ. ಭಟ್, ಅಜಿತ್ ಕಾರಂತ್, ಇಟಗಿ ಮಹಾಬಲೇಶ್ವರ ಭಟ್, ಪಟ್ಟಾಜೆ ವಸಂತಕೃಷ್ಣ, ಡಾ. ಶ್ರೀಕೃಷ್ಣ ಭಟ್ ಸುಣ್ಣಂಗುಳಿ, ವಿದ್ಯಾಹೆಗಡೆ ಕವಿತಾಸ್ಫೂರ್ತಿ, ಶಿವಕುಮಾರ ಬಿ. ಅಳಗೋಡು

**ಗೌರವಾನ್ವಿತ ಸ್ವಯಂಸೇವಕರು:**

ಗಣಪತಿ ಭಟ್ ಪಿ., ವಸುಮತಿ ಜಿ., ಅನಿತಾ ಎಂ. ಜಿ. ರಾವ್, ರಂಜನ ಭಟ್, ಶಶಿಕಲಾ ಮೂರ್ತಿ, ರಘುರಾಜ್ ಶರ್ಮ, ಚಂದ್ರು ಆಚಾರ್, ಸುಬ್ರಹ್ಮಣ್ಯ ಭಾಗವತ್, ಉಮೇಶ್ ಶಿರೂರು, ವೆಂಕಟೇಶ್ ಹೆಗಡೆ, ವೆಂಕಟೇಶ್ ವೈದ್ಯ, ಕೆ. ಗೋವಿಂದ ಭಟ್ ಬೆಂಗಳೂರು, ಸತೀಶ್ ಯಲ್ಲಾಪುರ, ಮಯೂರಿ ಉಪಾಧ್ಯಾಯ, ಶ್ರೀಕಾಂತ್ ನಾಯಕ್, ರವಿ ಕಾಮತ್ ಕುಮಟಾ, ರಾಮಕೃಷ್ಣ ಮರಾಠಿ

**ಸಹಕಾರ:**

**ಪ್ರಸಂಗ ಕವಿಗಳು:**

ಬಲಿಪ ನಾರಾಯಣ ಭಾಗವತ, ಹೊಸ್ತೋಟ ಮಂಜುನಾಥ ಭಾಗವತ, ಪ್ರೊ. ಎಂ. ಎ. ಹೆಗಡೆ, ಡಾ. ಅಮೃತ ಸೋಮೇಶ್ವರ, ಶ್ರೀಧರ ಡಿ. ಎಸ್., ಎಂ. ಆರ್. ಲಕ್ಷ್ಮೀನಾರಾಯಣ, ಮಧುಕುಮಾರ್ ಬೋಳೂರು, ಅಗರಿ ಭಾಸ್ಕರ ರಾವ್, ಅಂಬರೀಷ ಭಾರದ್ವಾಜ, ಶಿವಕುಮಾರ ಬಿ. ಅಳಗೋಡು, ದಿನೇಶ ಉಪ್ಪೂರ, ಗಿಂಡೀಮನೆ ಮೃತ್ಯುಂಜಯ, ಇಟಗಿ ಮಹಾಬಲೇಶ್ವರ ಭಟ್, ವಿಶ್ವವಿನೋದ ಬನಾರಿ, ಮಧೂರು ವೆಂಕಟಕೃಷ್ಣ, ಡಾ. ಪಟ್ಟಾಜೆ ಗಣೇಶ ಭಟ್

**ಕವಿಚರಿತ್ರೆ ಮತ್ತು ಪ್ರಸಂಗಯಾದಿ:**

ಡಾ. ಕಬ್ಬಿನಾಲೆ ವಸಂತ ಭಾರದ್ವಾಜ, ಡಾ. ಪಾದೇಕಲ್ಲು ವಿಷ್ಣು ಭಟ್

**ಸಂಸ್ಥೆಗಳು:**

ಕರ್ನಾಟಕ ಯಕ್ಷಗಾನ ಅಕಾಡೆಮಿ & ಕನ್ನಡ ಮತ್ತು ಸಂಸ್ಕೃತಿ ಇಲಾಖೆ (ಕರ್ನಾಟಕ ಸರ್ಕಾರ), ಯಕ್ಷಗಾನ ಕಲಾರಂಗ ಉಡುಪಿ, ಯಕ್ಷಸಿಂಚನ ಬೆಂಗಳೂರು

**ಪ್ರಸಂಗ ಪುಸ್ತಕ ಒದಗಣೆ ಮತ್ತಿತರ:**

ಡಾ. ರಾಧಾಕೃಷ್ಣ ಉರಾಳ್, ಅಗರಿ ಭಾಸ್ಕರ ರಾವ್, ಗೋಪಾಲಕೃಷ್ಣ ಭಾಗವತ್, ಶ್ರೀಪಾದಗದ್ದೆ, ಮುರಳಿ ಶ್ರೇಣಿ, ಅನಂತ ದಂತಳಿಕೆ, ಗುರುನಂದನ್ ಹೊಸೂರು, ನಾರಾಯಣ ಶಾನುಭಾಗ, ನಾರಾಯಣ ಯಾಜಿ, ಶೇಷಗಿರಿಯಪ್ಪ, ಎಸ್. ಎಂ. ಹಗಡೆ, ದಿವಾಕರ ಹೆಗಡೆ, ನಿತ್ಯಾನಂದ ಹೆಗಡೆ ಮೂರೂರು, ಶ್ರೀನಿಧಿ ಡಿ. ಎಸ್., ರವೀಂದ್ರ ಐತುಮನೆ, ಗುರುರಾಜ ಹೊಳ್ಳ ಬಾಯಾರು, ಸುರೇಶ್ ಹೆಗಡೆ ಬೆಳಸಲಿಗೆ, ಮನೋಹರ ಕುಂದರ್, ನಂದಳಿಕೆ ಬಾಲಚಂದ್ರ ರಾವ್, ರಘುರಾಮ್ ಮುಳಿಯ, ಸುಧಾ ಕಿರಣ್ ಅಧಿಕ ಶ್ರೇಣಿ, ಮಹಾಬಲಮೂರ್ತಿ ಕೊಡ್ಲೆಕೆರೆ, ಎ. ಎನ್. ಹೆಗಡೆ, ಮುರಳೀಧರ ಉಪಾಧ್ಯ

## ಯಕ್ಷವಾಹಿನಿ ಸಂಸ್ಥೆ

**ಗೌರವಾನ್ವಿತ ಸಲಹಾ ಮಂಡಳಿ:**

ಮಲ್ಪೆ ಲಕ್ಷ್ಮೀನಾರಾಯಣ ಸಾಮಗ (ಗೌರವಾಧ್ಯಕ್ಷರು), ಶ್ರೀಧರ ಡಿ. ಎಸ್., ಗಿಂಡೀಮನೆ ಮೃತ್ಯುಂಜಯ, ದಿನೇಶ ಉಪ್ಪೂರ, ಡಾ. ಪ್ರದೀಪ ಸಾಮಗ, ರಾಜಗೋಪಾಲ ಕನ್ಯಾನ, ಶಶಿರಾಜ ಸೋಮಯಾಜಿ, ಅನಂತ ಪದ್ಮನಾಭ ಫಾಟಕ್, ವಿದುಷಿ ಸುಮಂಗಲಾ ರತ್ನಾಕರ್, ಹರಿಕೃಷ್ಣ ಹೊಳ್ಳ, ಕಜೆ ಸುಬ್ರಹ್ಮಣ್ಯ ಭಟ್, ಲ. ನಾ. ಭಟ್, ರಾಘವೇಂದ್ರ ಮಯ್ಯ (ಲೆಕ್ಕ ಪರಿಶೋಧಕರು)

**ವಿಶ್ವಸ್ಥ ಮಂಡಳಿ ಮತ್ತು ಕಾರ್ಯಕಾರಿ ಮಂಡಳಿ:**

ಡಾ. ಆನಂದರಾಮ ಉಪಾಧ್ಯ (ಅಧ್ಯಕ್ಷ), ನಟರಾಜ ಉಪಾಧ್ಯ (ಕಾರ್ಯದರ್ಶಿ), ರವಿ ಮಡೋಡಿ (ಖಜಾಂಚಿ)

**ಆರ್ಥಿಕ ಸಹಾಯ:**

ಅಶೋಕ್ ಶೆಟ್ಟಿ ವಿ. ಕೊಡ್ಲಾಡಿ, ಗಿಂಡೀಮನೆ ಮೃತ್ಯುಂಜಯ, ನಟರಾಜ ಉಪಾಧ್ಯ

**ಪುಸ್ತಕ ಸಹಾಯ:**

ವಿದುಷಿ ಸುಮಂಗಲಾ ರತ್ನಾಕರ್, ಮಂಟಪ ಪ್ರಭಾಕರ ಉಪಾಧ್ಯ, ಡಾ. ಆನಂದರಾಮ ಉಪಾಧ್ಯ, ಗಿಂಡೀಮನೆ ಮೃತ್ಯುಂಜಯ, ನಟರಾಜ ಉಪಾಧ್ಯ


# ಮೊದಲ ಮಾತು

ಯಕ್ಷಗಾನ ಪ್ರದರ್ಶನಗಳಿಗೆ ಆಧಾರವಾಗಿರುವುದು ಪ್ರಸಂಗಸಾಹಿತ್ಯ. ಅದು ಯಕ್ಷಗಾನದ ಏಕಮಾತ್ರ ಲಿಖಿತಸಾಹಿತ್ಯವೂ ಹೌದು. ಅದರ ಅಭಾವದಲ್ಲಿ ಯಕ್ಷಗಾನದ ಅಡಿಪಾಯವೇ ಇಲ್ಲವಾಗುತ್ತದೆ. ಈಗ ಅಂದಾಜಿಸಿದಂತೆ ಇಂಥ ಪ್ರಸಂಗಕೃತಿಗಳ ಸಂಖ್ಯೆ ಐದು ಸಾವಿರಕ್ಕೂ ಮಿಕ್ಕಿದೆ. ವರ್ಷವರ್ಷವೂ ನೂರಾರು ಹೊಸಕೃತಿಗಳ ಸೇರ್ಪಡೆಯಾಗುತ್ತಲೇ ಇವೆ. ಆದರೆ ವಿಷಾದದ ಸಂಗತಿಯೆಂದರೆ ಸೂಕ್ತವಾದ ವಿತರಣಾ ವ್ಯವಸ್ಥೆಯಿಲ್ಲ. ಬೇಕೆಂಬುವರಿಗೆ ಪ್ರಸಂಗಗಳು ಲಭಿಸುತ್ತಿಲ್ಲ. ಅನೇಕ ಪ್ರಾಚೀನ ಅರ್ವಾಚೀನ ಕೃತಿಗಳಿಗೆ ಮುದ್ರಣ ಭಾಗ್ಯವಿಲ್ಲ. ಮುದ್ರಿತವಾದ ಕೃತಿಗಳ ಮಾರಾಟ ಮತ್ತಷ್ಟು ತೊಡಕಿನದು. ಹೀಗಾಗಿ ಈಗಾಗಲೇ ಅನೇಕ ಕೃತಿಗಳು ನಾಶವಾಗಿವೆ; ಮತ್ತಷ್ಟು ನಾಶವಾಗುತ್ತಿವೆ.

ಯಕ್ಷಗಾನ ಪ್ರಸಂಗಗಳು ಕನ್ನಡಸಾಹಿತ್ಯದ ಶ್ರೀಮಂತಿಕೆಯ ದ್ಯೋತಕಗಳು. ಕನ್ನಡದಲ್ಲಿ ಬೆಳೆದು ಬಂದ ಛಂದೋ ವೈವಿಧ್ಯದ ಸಾರವನ್ನೆಲ್ಲ ಹೀರಿಕೊಂಡು ಸುಪುಷ್ಟವಾಗಿ ಬೆಳೆದು ನಿಂತ ಈ ಸಾಹಿತ್ಯ ಪ್ರಕಾರವು ಕನ್ನಡಕ್ಕೊಂದು ಹೆಮ್ಮೆ. ಅದರ ಸಿದ್ಧಿ ಸಾಧನೆಗಳನ್ನು ಕುರಿತು ಗಂಭೀರವಾದ ಅಧ್ಯಯನದ ಆವಶ್ಯಕತೆಯಿದೆ. ಆದರೆ ಪ್ರಸಂಗಳ ಅಲಭ್ಯತೆ ಅಧ್ಯಯನಕ್ಕೆ ತೊಡಕಾಗಿದೆ. ಅಧ್ಯಯನಕ್ಕೆ ತೊಡಗುವವರಿಗೆ ಕೃತಿಗಳನ್ನು ಸಂಗ್ರಹಿಸುವುದೊಂದು ದೊಡ್ಡ ಸವಾಲಾಗಿದೆ. ಇದರಿಂದ ಯಕ್ಷಗಾನಕ್ಕೆ ತನ್ಮೂಲಕ ಕನ್ನಡ ಸಾಹಿತ್ಯಕ್ಕೆ  ಹಾನಿಯಾಗುತ್ತಿದೆ.

ಇದನ್ನು ಮನಗಂಡ ಯಕ್ಷಗಾನ ಅಕಾಡೆಮಿಯು ಮಹತ್ವಾಕಾಂಕ್ಷೆಯ ಯೋಜನೆಯೊಂದನ್ನು ಕೈಗೊಂಡಿದೆ. ಅದೇ ಯಕ್ಷಗಾನ ಪ್ರಸಂಗಗಳ ಡಿಜಿಟಲೀಕರಣ. ಎಲ್ಲ ಪ್ರಸಂಗಗಳನ್ನು ಡಿಜಿಟಲೀಕರಣಕ್ಕೊಳಪಡಿಸಿ ಅಕಾಡೆಮಿಯ ವೆಬ್ಸೈಟಿನ ಮೂಲಕ ಆಸಕ್ತರಿಗೆ ಉಚಿತವಾಗಿ ತಲುಪಿಸುವ ವ್ಯವಸ್ಥೆ ಇದು. ಪ್ರಪಂಚದ ಯಾವುದೇ ಮೂಲೆಯಲ್ಲಿದ್ದರೂ ಬೇಕಾದ ಕೃತಿಯನ್ನು ಪಡೆದುಕೊಳ್ಳಲು ಯಕ್ಷಗಾನ ಪ್ರಸಂಗವನ್ನು ತೆಗೆದುಕೊಂಡು ಯಕ್ಷಗಾನ ಮಾಡುವವರಿಗೆ ಅತ್ಯಂತ ಅನುಕೂಲ. ಅಧ್ಯಯನಕ್ಕೂ, ಸಂಗ್ರಹಕ್ಕೂ ಅನುಕೂಲ ಹಾಗೂ  ಯಕ್ಷಗಾನ ಪ್ರಿಯರಿಗೆ ಆಪ್ತವಾದೀತೆಂದು ಭಾವಿಸಿದ್ದೇವೆ.

ಇದನ್ನು ಕಾರ್ಯಗತಗೊಳಿಸಲು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನೆರವು ದೊಡ್ಡದು. ಈ ಕಾರ್ಯಕ್ಕೆ ಯಕ್ಷವಾಹಿನಿ ಸಂಸ್ಥೆಯು ಕೈಜೋಡಿಸಿರುವುದು ಹಾಗೂ ಪುಸ್ತಕರೂಪದಲ್ಲಿ ಯಕ್ಷಗಾನ ಪ್ರಸಂಗವನ್ನು ಸಿದ್ಧಗೊಳಿಸಿಕೊಡುತ್ತಿದೆ. ಇದಕ್ಕೆ ಅಕಾಡೆಮಿಯ ಸರ್ವಸದಸ್ಯರ ಸಹಮತವಿದೆ. ಈ ಯೋಜನೆಯನ್ನು ಕೃತಿರೂಪಕ್ಕೆ ತರಲು ಸಹಕರಿಸಿದವರೆಲ್ಲರನ್ನೂ, ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಚಿವರನ್ನೂ, ಸರ್ಕಾರವನ್ನೂ ಹೃತ್ಪೂರ್ವಕವಾಗಿ ನೆನೆಯುತ್ತೇವೆ.



ಪ್ರೊ. ಎಂ. ಎ. ಹೆಗಡೆ
ಅಧ್ಯಕ್ಷರು
ಕರ್ನಾಟಕ ಯಕ್ಷಗಾನ ಅಕಾಡೆಮಿ



ಎಸ್. ಎಚ್. ಶಿವರುದ್ರಪ್ಪ
ರಿಜಿಸ್ಟ್ರಾರ್
ಕರ್ನಾಟಕ ಯಕ್ಷಗಾನ ಅಕಾಡೆಮಿ

## ಯಕ್ಷಪ್ರಸಂಗಕೋಶ ಯೋಜನೆ

ಕನ್ನಡ ಕಾವ್ಯದ ಚರಿತ್ರೆಯಲ್ಲಿ ಬಹುದೊಡ್ಡ ಸ್ಥಾನ ಪಡೆಯಬೇಕಾದ ಕೃತಿಗಳು ಅವಜ್ಞೆಗೊಳಗಾದುದನ್ನು ಗಮನಿಸಿ ಯಕ್ಷವಾಹಿನಿ ಸಂಸ್ಥೆಯಿಂದ ಯಕ್ಷಪ್ರಸಂಗಕೋಶದ ನಿರ್ಮಾಣವಾಗುತ್ತಿದೆ. ಯಕ್ಷಗಾನ ಪ್ರಸಂಗಗಳು ಪ್ರಯೋಗದ ಆಧಾರ ಪಠ್ಯಗಳು. ವ್ಯಾಖ್ಯಾನದ ಅಗತ್ಯವೂ ಇರುವುದರಿಂದ ಪ್ರಸಂಗಕವಿಗಳು ಬರೆದ ಗೀತೆಗಳು ಗುಣಮಟ್ಟದಲ್ಲೂ ಮೇಲಾಗಿದ್ದು ವಿದ್ವಾಂಸರಿಂದ ಮರಳಿ ಮರಳಿ ವ್ಯಾಖ್ಯಾನಕ್ಕೆ ಒಳಗಾಗಿವೆ. ಇಂತಹ ಪಠ್ಯಗಳನ್ನು ಖಿಲವಾಗದಂತೆ ಶಾಶ್ವತವಾಗಿ ಕಾಪಿಡುವುದೂ, ಜಾಗತಿಕ ಮಟ್ಟದಲ್ಲಿ ಲಭ್ಯವಾಗುವಂತೆ ಮಾಡುವುದೂ ನಮ್ಮ ಯಕ್ಷಪ್ರಸಂಗಕೋಶದ ಉದ್ದೇಶ. ಅದಕ್ಕೆ ಇಂದು ಅಂತರಜಾಲವೇ ಸೂಕ್ತ ಮಾಧ್ಯಮವಾಗಿದೆ. ಅಂತರಜಾಲದ ಮೂಲಕ ಪ್ರಕಟವಾದ ಪ್ರಸಂಗವೂ, ಅದನ್ನು ಸಿದ್ಧಪಡಿಸಿದ ಸಂಸ್ಥೆಯೂ ಇಡೀ ವಿಶ್ವದ ಮುಂದೆ ನಿಂತಿರುತ್ತದೆ ಎಂಬ ಅರಿವನ್ನುಇಟ್ಟುಕೊಂಡೇ ಪ್ರಸಂಗಗಳನ್ನು ಸಿದ್ಧಪಡಿಸಿದ್ದೇವೆ.

ಪ್ರಸಂಗಗಳ ಪ್ರಸ್ತುತ ರೂಪದಲ್ಲಿ ಇರುವ ಮುದ್ರಣ ದೋಷಗಳು, ವ್ಯಾಕರಣ ದೋಷಗಳು, ಗ್ರಾಮ್ಯಶಬ್ದಗಳ ಬಳಕೆಯಿಂದಾದ ಶೈಥಿಲ್ಯ, ಶಬ್ದಗಳನ್ನು ಬಿಡಿಸಬೇಕಾಗಿದ್ದಲ್ಲಿ ಕೂಡಿಸಿ, ಕೂಡಿಸಬೇಕಾಗಿದ್ದಲ್ಲಿ ಬಿಡಿಸಿ ಉಂಟಾದ ದೋಷಗಳು, ಮಟ್ಟುಗಳ ಹೆಸರುಗಳಲ್ಲಿ ಕಣ್ತಪ್ಪಿನಿಂದ ನುಸುಳಿದ ದೋಷಗಳು, ಆಟ ಆಡಿಸುವಾಗ ಅನುಕೂಲಕ್ಕೆ ತಕ್ಕಂತೆ ಭಾಗವತರು ಸೇರಿಸಿಕೊಂಡ ಅನ್ಯ ಪ್ರಸಂಗಗಳ ಪದಗಳು ಮುದ್ರಿತರೂಪದಲ್ಲಿ ಸೇರಿಹೋಗಿರುವುದು, ಮುದ್ರಣವಾಗುವಾಗ ಕೆಲವು ಪದಗಳು ಬಿಟ್ಟುಹೋಗಿರುವುದು ಇವುಗಳೆಲ್ಲ ಕವಿಯು ಶ್ರಮವಹಿಸಿ ರಚಿಸಿದ ಸುಂದರ ರಚನೆಯಲ್ಲಿ ಅರ್ಥಾಂತರವನ್ನೋ, ಅಪಾರ್ಥವನ್ನೋ ಉಂಟುಮಾಡುವ ಸಾಧ್ಯತೆಯಿದೆ. ಈಗ ಪ್ರಕಟಿಸುತ್ತಿರುವ ಪ್ರಸಂಗಗಳನ್ನು ಸಾಧ್ಯವಾದ ಮಟ್ಟಿಗೆ ಈ ದೋಷಗಳಿಂದ ಮುಕ್ತಗೊಳಿಸಿದ್ದೇವೆ ಎಂಬ ಭರವಸೆ ನಮಗಿದೆ. ಒಟ್ಟಿನಲ್ಲಿ ನಮ್ಮ 'ಪ್ರಸಂಗಕೋಶ'ದಿಂದ ಪಡೆದುಕೊಂಡ ಪ್ರಸಂಗವು ಶುದ್ಧವಾಗಿರಬೇಕೆಂಬುದೇ ನಮ್ಮ ಅಪೇಕ್ಷೆ.



**ಶ್ರೀಧರ ಡಿ. ಎಸ್.**
ಪ್ರಧಾನ ಸಂಪಾದಕರು



**ಗಿಂಡೀಮನೆ ಮೃತ್ಯುಂಜಯ**
ಸಹ ಸಂಪಾದಕರು



**ರವಿ ಮಡೋಡಿ**
ಯೋಜನಾಧ್ಯಕ್ಷರು

## ಯಕ್ಷವಾಹಿನಿ

ಯಕ್ಷಗಾನವು ಕನ್ನಡ ಸಂಸ್ಕೃತಿಯ ಕಿರೀಟದಲ್ಲಿ ರಾರಾಜಿಸುತ್ತಿರುವ ದೊಡ್ಡ ನವಿಲುಗರಿಯು. ಅಖಂಡ ಕರ್ನಾಟಕದ ಯಕ್ಷಗಾನ ಪರಂಪರೆಯ ಹಿರಿಮೆ ಗರಿಮೆಗಳನ್ನು ಹೆಚ್ಚಿಸುವತ್ತ ಅಂತರಜಾಲದ ಸಾಧ್ಯತೆಗಳನ್ನು ಸದುಪಯೋಗಪಡಿಸಿಕೊಳ್ಳುವುದೇ ಯಕ್ಷವಾಹಿನಿ ಸಂಸ್ಥೆಯ ಮುಖ್ಯ ದರ್ಶನವಾಗಿದೆ. ಯಕ್ಷಪ್ರಸಂಗಯಾದಿ ಮತ್ತು ಯಕ್ಷಪ್ರಸಂಗಕೋಶ ಇವೆರೆಡು ನಾವು ಈಗಾಗಲೇ ತೊಡಗಿಸಿಕೊಂಡಿರುವ ಪ್ರಾಥಮಿಕ ಯೋಜನೆಗಳು. ಈ ಯೋಜನೆಗಳಿಗೆ ಬೆನ್ನೆಲುಬಾಗಿ ನಮ್ಮೊಂದಿಗಿರುವ ಎಲ್ಲಾ ವಿದ್ವಾಂಸರು, ಪ್ರಸಂಗಕವಿಗಳು, ಸ್ವಯಂಸೇವಕರು, ಪ್ರಾಯೋಜಕರು ಹಾಗೂ ಎಲ್ಲಾ ರೀತಿಯ ಬೆಂಬಲ ಮತ್ತು ಸಹಾಯ ನೀಡುತ್ತಿರುವ ವಿಶ್ವವ್ಯಾಪಿ ಯಕ್ಷಪ್ರೇಮಿಗಳಿಗೆ ವಿನಮ್ರ ಧನ್ಯವಾದಗಳು. ಪ್ರಾಯೋಜಕತ್ವ ಹೆಚ್ಚಿದಂತೆ ನಮ್ಮ ಇನ್ನೂ ಅನೇಕ ಕನಸುಗಳು ಯೋಜನೆಗಳಾಗಿ ಅನಾವರಣಗೊಳ್ಳಲಿವೆ. ನಿಮ್ಮ ಹೆಚ್ಚುತ್ತಿರುವ ಸಹಕಾರ, ಸಹಾಯ, ಬೆಂಬಲ ಮತ್ತು ಆಶೀರ್ವಾದಕ್ಕೆ ನಾವು ಚಿರಋಣಿಗಳು.

**ಪ್ರೊ. ಮಲ್ಪೆ ಲಕ್ಷ್ಮೀನಾರಾಯಣ ಸಾಮಗ, ಗೌರವಾಧ್ಯಕ್ಷರು**

**ಡಾ. ಆನಂದರಾಮ ಉಪಾಧ್ಯ, ಕಾರ್ಯಾಧ್ಯಕ್ಷ ಮತ್ತು ವಿಶ್ವಸ್ಥ**

**ನಟರಾಜ ಉಪಾಧ್ಯ, ಕಾರ್ಯದರ್ಶಿ ಮತ್ತು ವಿಶ್ವಸ್ಥ**

**ರವಿ ಮಡೋಡಿ, ಖಜಾಂಚಿ ಮತ್ತು ವಿಶ್ವಸ್ಥ**

# ಸಾರಾಂಶ

**ಪ್ರಸಂಗ ವಿಧ:**

ಪೌರಾಣಿಕ

**ಆಧಾರ ಗ್ರಂಥ:**

ಶ್ರೀಮನ್ಮಹಾಭಾರತ

**ಭಾಷೆ:**

ಕನ್ನಡ

**ಹಿಂದಿನ ಪ್ರಕಾಶನಗಳ ವಿವರ:**

ಪಾವಂಜೆ ಗುರುರಾವ್ ಅಂಡ್ ಸನ್ಸ್

**ಹಕ್ಕುಸ್ವಾಮ್ಯ ವಿವರ:**

ಈ ಅಂತರಜಾಲ ಆವೃತ್ತಿಯು ವಿಶ್ವದಾದ್ಯಂತ ಉಚಿತವಾಗಿ ಹಂಚಲ್ಪಡುವುದೇ ಜಂಟಿ ಪ್ರಕಾಶಕರ ಘನ ಉದ್ದೇಶವು. ಈ ಆವೃತ್ತಿಯನ್ನು ಹೇಗಿದೆಯೋ ಹಾಗೆಯೇ ಸಮಗ್ರವಾಗಿ ಮುದ್ರಿಸಲು ಯಾ ಅಂತರಜಾಲದ ಮೂಲಕ ಉಚಿತವಾಗಿ ಹಂಚಲು ಯಾವುದೇ ಅಭ್ಯಂತರ ಇಲ್ಲ. ಮೂಲ ಪ್ರಕಾಶನಗಳ ಹಕ್ಕುಸ್ವಾಮ್ಯ ಹೇಗಿದೆಯೋ ಹಾಗೆಯೇ ಉಳಿದಿರುತ್ತದೆ.

**ಒಟ್ಟು ಪದ್ಯಗಳು:**

೨೦೩

**ಪಾತ್ರಗಳು:**

ಧರ್ಮರಾಜ, ಭೀಮ, ಅರ್ಜುನ, ಸುಭದ್ರೆ, ನಕುಲ, ಗಾರುಡಿ, ನಾರದ, ಕೃಷ್ಣ, ಮಾಯಾಮೋಹಿನಿ, ಮಕ್ಕಳು

**ಕಥಾ ಸಾರಾಂಶ:**

ಮಹಾಭಾರತ ಯುದ್ಧದ ನಂತರ ಭೀಮಾರ್ಜುನರು ಅಹಂಕಾರದಿಂದ ಧರ್ಮರಾಜನನ್ನು ಅಲಕ್ಷಿಸಿದಾಗ ಅವರ ಸೊಕ್ಕನ್ನು ಇಳಿಸಲು ಹರಿಯು ಗಾರುಡಿಯ ವೇಷದಲ್ಲಿ ಬಂದು ಭೀಮನಿಗೆ ಹಾವನ್ನು ಎತ್ತಲು ಹೇಳುತ್ತಾನೆ. ಅವನು ಎತ್ತಲಾಗದೇ ಸೋತಾಗ ಹರಿನಾಮಸ್ಮರಣೆ ಮಾಡುತ್ತ ನಕುಲ ಎತ್ತುತ್ತಾನೆ. ಅರ್ಜುನ ಏರಿದ ಕುದುರೆ ಗಗನದಲ್ಲಿ ಹಾರಿ ಕಾಡಿನಲ್ಲಿ ಬೀಳಿಸಿದಾಗ ಮಾಯಾಮೋಹಿನಿಯಯನ್ನು ಮೋಹಿಸಿ ಮದುವೆಯಾಗಿ ಮಕ್ಕಳಾಗಿ ಸಂಸಾರದ ಜಂಜಾಟದಲ್ಲಿ ಬಿದ್ದು ಸಾಕಾಗಿ ಹಸ್ತಿನಾವತಿಗೆ ಬರುತ್ತಾನೆ. ಧರ್ಮರಾಜನು ಕೃಷ್ಣನನ್ನು ಸ್ಮರಿಸಲು ಅವನಿಂದ ಎಲ್ಲವೂ ಕ್ಷೇಮವಾಗಿ ಸುಖಾಂತವಾಗುತ್ತದೆ.

**ಕವಿ ಪರಿಚಯ: ( ಆಧಾರ: ಕರ್ನಾಟಕ ಯಕ್ಷಗಾನ ಕವಿ ಚರಿತ್ರೆ – ಡಾ. ಕಬ್ಬಿನಾಲೆ ವಸಂತ ಭಾರದ್ವಾಜ)**

ಶಿರೂರು ಫಣಿಯಪ್ಪಯ್ಯ (ಕ್ರಿ.ಶ. ೧೯೧೮ - ೨೦೦೪) ಇವರು ಕುಂದಾಪುರ ಹತ್ತಿರದ ಶಿರೂರಿನವರು. ತಂದೆ ಶ್ಯಾನುಭೋಗ ದೇವಪ್ಪಯ್ಯ, ತಾಯಿ ಗೌರಮ್ಮ, ಪತ್ನಿ ಗಿರಿಜಾ. ಕೃಷಿ, ದೇವಸ್ಥಾನದ ಮೊಕ್ತೇಸರಿಕೆ, ಸಹಕಾರ ಸಂಘ, ಗ್ರಾಮ ಪಂಚಾಯತು ಸದಸ್ಯತ್ವ, ಇತ್ಯಾದಿ ವಿಷಯಗಳಲ್ಲೂ ಕ್ರಿಯಾಶೀಲರಾಗಿದ್ದರು. ೨೦೦೧ರಲ್ಲಿ ಇವರಿಗೆ ಕರ್ನಾಟಕ ರಾಜ್ಯ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಪ್ರಶಸ್ತಿಯು ದೊರೆತಿದೆ.

ಇವರು ಬರೆದ ಪ್ರಸಂಗಗಳು: ಮಹೇಂದ್ರ ವಿಜಯ, ಶ್ರೀಕೃಷ್ಣಗಾರುಡಿ, ನಹುಷೋದ್ಭವ, ಮದಾಲಸಾ ಪರಿಣಯ, ವಾಜೀಗ್ರಹಣ, ಸಗರಾಶ್ವಮೇಧ, ಅಮೃತಾಪಹರಣ, ಶ್ವೇತಚಂದ್ರಿಕಾ, ವೀರವರ್ಮ ಕಾಳಗ, ನೀಲಧ್ವಜ ಕಾಳಗ, ಭೂಮಿಕಾ ಪರಿಣಯ, ಭ್ರಮರವೇಣಿ ಕಲ್ಯಾಣ, ಪೌಲೋಮ ಚರಿತ್ರೆ, ಸರ್ಪಾಧ್ವರ, ಅಬ್ಯಾಡಿ ಕ್ಷೇತ್ರ ಮಹಾತ್ಮೆ

**ಟಿಪ್ಪಣಿ :**

# ಪ್ರಸಂಗ ಸಾಹಿತ್ಯ

**ಶಾರ್ದೂಲವಿಕ್ರೀಡಿತ ವೃತ್ತ**
ಶ್ರೀವಾಣೀಧವಸನ್ನುತಂ ಸುರನುತಂ ಮಾವಲ್ಲಭಂ ಕೇಶವಂ |
ಭಾವೋದ್ಭೂತಪಿತಂ ಜಗತ್ಪ್ರತಿಹಿತಂ ದಾವಾಗ್ನಿನೇತ್ರಪ್ರಿಯಮ್ ||
ದೇವೋತ್ತುಂಗಮಹಾಹಿತಲ್ಪಸುಜನಾದ್ಯೋವಂ ಕೃಪಾವಾರಿಧಿಂ |
ಭಾವಾತೀತಮನಂತಭಕ್ತಹಿತಸಂಜೀವಂ ಸದಾ ಭಾವಯೇ || ೧ || 1 ||

**ನಾಟಿ - ರೂಪಕ**
ಪಾಲಿಸು ಗಜಮುಖ ಗೌರೀ | ಬಾಲಕ ಸುಕಲಾನ್ವಿತ ಸುಖ |
ಪಾಲಿಸು ನಂಬಿದೆ ಪೊರೆ ಕರು | ಣಾಲಯ ಗುಣಸಿಂಧು ||
ಫಾಲಾಂಬಕನಾತ್ಮಜನೆ ಸು | ರಾಳಿನಮಿತಚರಣನೆ ಭವ |
ಜಾಲವಿದೂರನೆ ವಿಘ್ನ ನಿ | ವಾಳಿಸು ಶರಣೆಂಬೆ ||
ಜಯ ಜಯ ಜಯ ಜಯತು || ೧ ||

ರಕ್ತಾಂಬರಧರಸುಂದರ | ಮುಕ್ತಿಪ್ರದಾಯಕ ಶುಭಕರ |
ಶಕ್ತಿಸ್ವರೂಪನೆ ಸುಜನಾ | ಸಕ್ತನೆ ಭವದೂರ ||
ಭಕ್ತರಭೀಷ್ಟಪ್ರದಾಯಕ | ಭೋಕ್ತಪ್ರಿಯ ಸವಿಮೋದಕ |
ಭಕ್ತಿಯೊಳೆರಗುವೆ ಪೊರೆ ನಿಗ | ಮೋಕ್ತನೆ ದಯದೋರಿ || ಜಯ || ೨ ||

ಮೂಷಿಕವಾಹನ ದುಷ್ಟವಿ | ನಾಶನ ಸಜ್ಜನಪೋಷಣ |
ವಾಸವನಮಿತ ಪದಾಂಬುಜ | ಕೇಶವಸಖತನುಜ ||
ಈ ಸುಕವಿತೆಯನು ಮೆರೆಸು ಕೃ | ಪಾಸಾಗರ ನಂಬಿದೆ ವಿ |
ಘ್ನೇಶ ವಿನಾಯಕ ಶಿರಿಪುರ | ವಾಸನೆ ದಯವಿರಿಸು || ೩ || 4 ||

**ಭಾಮಿನಿ**
ಹರ ಗಿರಿಜೆ ಹರಿ ಲಕ್ಷ್ಮಿ ವಾಣೀ |
ವರ ಸರಸ್ವತಿಯರಿಗೆರಗಿ ಪಂ |
ಕರುಹಸಖ ಮೊದಲಾದ ನವಗ್ರಹಗಳಿಗೆ ತಲೆಬಾಗೀ ||
ಧರೆಯ ಕವಿಜನಕೆರಗಿ ಮಾರುತ |
ತರಳಗಭಿನಮಿಸುತ್ತ ಗುರುಪದ |
ಸರಸಿಜಕೆ ಪಿತಮಾತೆಯರಿಗೊಂದಿಸುತೊರೆವೆನಿದನು || ೧ || 5 ||

**ಸೌರಾಷ್ಟ್ರ - ತ್ರಿವುಡೆ**
ಅರಸ ಜನಮೇಜಯನು ಕೈಮುಗಿ |
ದೆರಗಿ ವೈಶಂಪಾಯಮುನಿಪನೊ |
ಳೊರೆದ ಪಾಂಡವರೈಕಮತ್ಯದೊ | ಳಿರದೆ ಛಲದಿ || ೧ ||

ಅಗ್ರಭವನೊಳು ವಾದಿಸುತ್ತ ದು |
ರಾಗ್ರಹದಿ ನರಭೀಮರ್ಯಾತಕೆ |
ವ್ಯಗ್ರರಾಗಿ ಧರಿತ್ರಿ ಕೋಶ ಸ | ಮಗ್ರವನ್ನು || ೨ ||

ಹಸುಗೆ ಗೆಯ್ಯುವ ಮನದೊಳಿರಲಾ |
ಕುಸುಮನಾಭನುಪಾಯದಿಂದವ |
ರಸಮಗರ್ವವ ನಿಲಿಸಿ ಪೊರೆದುದ | ನುಸಿರಿರೆಂದು || ೩ ||

ಕೇಳಿಕೊಂಡವನೀಶನತುಳ ವಿ |
ಶಾಲ ಭಕುತಿಗೆ ಮೆಚ್ಚಿ ಮುನಿಕುಲ |
ಮೌಳಿಯುಸಿರಿದನಮಿತಗುಣಹರಿ | ಲೀಲೆಗಳನು || ೪ || 9 ||

**ವಾರ್ಧಕ**
ಇಳೆಯರಸ ಕೇಳು ಪಾಂಡವರಿಂದ ಕೌರವರ |
ಕುಲವ ಸಂಹರಿಸಿ ತದ್ರಾಜ್ಯಮಂ ಧರ್ಮಜಗೆ |
ನೆಲೆಗೊಳಿಸಿ ಮುರವೈರಿ ಬಳಿಕಾಯುಧಿಷ್ಠಿರನೊಳಿಳೆಯ ಪಾಲಿಪ ರೀತಿಯ ||
ತಿಳುಹಿ ಯುವರಾಜ ಸಹದೇವ ನಕುಲನು ಮಂತ್ರಿ |
ಪೊಳಲ ರಕ್ಷಣೆ ಭೀಮ ನರನತಿಥಿಸತ್ಕಾರ |
ಗೊಳಿಸಲೆಂದರುಹಿ ತೆರಳಲ್ಕೊಂದು ದಿನ ಸಹಜರೊಡನೆಂದ ಯಮಜಾತನು || ೧ || 10 ||

**ಕಾಂಭೋದಿ - ಝಂಪೆ**
ಸಹಜಾತರಿರ ಕೇಳಿ | ರಹಿತಲ್ಪನೆಮ್ಮೊಡನೆ |
ಸಹಕರಿಸಿ ಧರೆಯ ಪಾಲಿಸಿದ ||
ಮಹಿಯು ಕೈವಶವಾದು | ದಹುದಿನ್ನು ಮುಂದಿಳೆಯ |
ವಿಹಿತದಿಂದಾಳ್ವ ರೀತಿಯನು || ೧ ||

ಕಂತುಪಿತನೊರೆದ ಪರಿ | ಯಿಂತಿಹುದು ಸಹದೇವ |
ಮುಂತೆ ಯುವರಾಜನವ ನಕುಲ ||
ಮಂತ್ರಿ ಪುರರಕ್ಷೆ ಭೀ | ಮನಿಗತಿಥಿಸತ್ಕಾರ |
ದಂತಿವಾಹನಸುತನಿಗೆಂದು || ೨ ||

ಪೇಳಿ ತೆರಳಿಹ ನಿಮ್ಮ | ಶಾಲೋಚಿಸುತ ಮುಂದಿ |
ನೇಳಿಗೆಯ ಬಯಸಿ ಮನದಿರವ ||
ಪೇಳಿರನ್ಯಥ ಭೇದ | ತಾಳದಿರಿಯೆನಲು ಕಿಡಿ |
ಯೂಳಿ ಮರುತಾತ್ಮಭವನೆಂದ || ೩ || 13 ||

**ಭೈರವಿ - ಏಕ**
ಭಳಿರೆ ಶಭಾಸಗ್ರಜನೆ | ಹರಿ |
ತಿಳುಹಿದನೇ ನಿನ್ನೊಡನೆ ||
ಗೆಲುವಾದುದೆ ತವ ಮನಕೆ | ಗೆಲಿ |
ದಿಳೆಯೊಶವಾದುದೆ ಘನಕೆ || ೧ ||

ಅಂದಿಂದಿಂದಿನ ತನಕ | ಮಮ |
ತಂದೆಗೆ ಸರಿಯೆಂದನಕ ||
ಹೊಂದಿಕೆಯೊಳು ನಾವಿರ್ದು | ಶಿರ |
ಕಿಂದೇರಿತೆ ಮದವೇರ್ದು || ೨ ||

ಅಲ್ಲದಿರಲು ನೆಲೆಯರಿತು | ತಿಳಿ |
ವಿಲ್ಲದ ತೆರದಲಿ ಮರೆತು ||
ಸಲ್ಲದ ಕೆಲಸವ ತನಗೆ | ಸಿರಿ |
ವಲ್ಲಭ ಪೇಳ್ದನೆ ನಿನಗೆ || ೩ ||

ತವ ಮನಕಿದು ಹಿತವಾಯ್ತೆ | ಈ |
ಭುವಿಯಾಳ್ವಿಕೆ ಸರಿಹೋಯ್ತೆ ||
ಯುವರಾಜನೆ ಸಹದೇವ | ಸಹ |
ಭವ ಪಿರಿಯವನಿರೆ ವಹವ್ವಾ || ೪ ||

ಸಲ್ಲದ ನಡತೆಗೆ ಯೆನ್ನ | ಮನ |
ವೊಲ್ಲದು ಬಿಡು ಬಿಡು ಇನ್ನಾ ||
ಕ್ಷುಲ್ಲ ವಿಚಾರವನೆನುತ | ರಣ |
ಮಲ್ಲನೊರೆದ ಗರ್ಜಿಸುತ || ೫ || 18 ||

**ಭೈರವಿ - ಅಷ್ಟ**
ಅನಿತರೊಳರ್ಜುನನು | ಪೇಳಿದನಿಂತು |
ಜನಪ ನಿನ್ನಾಜ್ಞೆಯನು ||
ಅನವರತವು ಪಾಲಿಸುತ್ತಿಹೆವೆಂದೀಗ |
ಮನಕೆ ಬಂದುದ ಪೇಳ್ವರೆ || ೧ ||

ಮುರಮಥನನ ನೇಮವ | ಪಾಲಿಸುತಲೀ |
ವರೆಗೆ ಕಾಯ್ದೆವು ಧರ್ಮವ ||
ಧುರದಿ ಹೊಯ್ದಾಡಿ ಕೈಗೊಳಿಸಿದೆ ದೊರೆತನ |
ವಿರಲಗ್ರಜನಿಗೆನ್ನುತ || ೨ ||

ಅದರಿಂದತಿಥಿಸತ್ಕಾರ | ವೆನಗೆ ನೇಮಿ |
ಸಿದೆ ತ್ರಿಭುವನದಿ ಶೂರ ||
ಮದನಾರಿಯೊಳು ಜಯಿಸಿದ ವೀರನೆಂದರಿ |
ಯದೆ ಹೋಯ್ತೆ ಮನಕಿದರ || ೩ ||

ಬಿಡು ಬಿಡೀ ನುಡಿಯನಿನ್ನು | ಆಡದಿರೆನ್ನೊಳ್ |
ಪೊಡವಿಪನಾಜ್ಞೆಯನು ||
ನಡೆಸಲಿಲ್ಲೆಂದರು ಒಡಬಡದೆನಗಿಂಥ |
ನಡತೆಗೆ ಮನವೆಂದನು || ೪ || 22 ||

**ಭಾಮಿನಿ**
ಅನುಜರೆಂದುದ ಕೇಳುತಂತಕ |
ತನುಜನುಸಿರಿದ ನಿಮ್ಮ ಮನದಿರ |
ವನು ತಿಳಿಯಲರುಹಿದೆನು ಮಾಧವನುಕ್ತಿಗಳು ನಮಗೆ ||
ಸನುಮತವು ನಮ್ಮೆಳಿಗೆಯನೀ |
ತನಕ ನೋಡುತ ಕಾಯ್ದ ಕರುಣಾ |
ವನಧಿಯಾಜ್ಞೆಯ ಮೀರೆನೆನೆ ಕಿಡಿಸೂಸಿ ಮರುತಜನು || ೧ || 23 ||

**ಘಂಟಾರವ - ಅಷ್ಟ**
ಬಿಡು ಬಿಡೆನ್ನೊಳೀ ನುಡಿಯನಗ್ರಜ ನಿನ್ನ |
ನಡತೆಗೊಡಬಡುತಿಂದು ಪರಿಯಂ |
ತೊಡನೆ ಕಷ್ಟವ ತಡೆದೆವು || ೧ ||

ಕಾನನಾಂತರ ಚರಿಸಿ ವಿರಾಟನ |
ಬಾಣಸಿಗ ತಾನಾಗಿ ದಿನವನು |
ಹೀನತನದಿಂ ಕಳೆದೆನು || ೨ ||

ಖೂಳ ಕೌರವನೆನಿತುಪಟಳ ಕೊಡೆ |
ತಾಳಿಕೊಂಡೆವು ನಿನ್ನ ಸತ್ಯವು |
ಪಾಳುಗೆಡದಿರಲೆನ್ನುತ || ೩ ||

ಒಂದನೂ ಗ್ರಹಿಸದೆ ಹೀನ ವೃತ್ತಿಯ |
ನಿಂದು ನೇಮಿಸಲಿರೆನು ನಿನ್ನೊಳು |
ಮಂದರಾಧರನೆಂದರು || ೪ ||

ಕೊಡುಕೊಡೆನ್ನ ಧರಾತಳದಂಶವ |
ಬಿಡೆನು ಸರ್ವಥ ಸಾಮದಿಂದಲಿ |
ಕೊಡದಿರಲು ವಶಗೈವೆನು || ೫ || 28 ||

**ಮಾರವಿ - ಏಕ**

ಮರುತಾತ್ಮಜನಿಂತೆಂದುದ ಕೇಳುತ |
ನರನತಿ ರೋಷದೊಳು ||
ಸರಿ ಸರಿಯಗ್ರಜನೆಂದುದು ಸರ್ವಥ |
ವಿರೆ ನಿನ್ನಾಜ್ಞೆಯೊಳು || ೧ ||

ಪೊಡವಿಯ ಭಾಗವ ಕೊಡು ಕೊಡು ಭೀಮನ |
ನುಡಿಯಹುದಿನ್ನಿರಲು ||
ಒಡಬಡದೆನ್ನಯ ಮನವೆಂದಗ್ರಜ |
ನೊಡನತಿ ವಾದಿಸಲು || ೨ ||

ಇಂತಾ ಮರುತಜ ಪಾರ್ಥರು ವಾದಿಸಿ |
ನಿಂತಿರೆ ಕಾಲಜನು ||
ಚಿಂತಿಸಿ ಬೆರಗಿನೊಳಿರೆ ಸೌಭದ್ರೆಯು |
ಕಾಂತನಿಗುಸಿರಿದಳು || ೩ || 31 ||

**ಸಂವಾದ**

ಏನೀದೇನೀ ಕೋಪಾಟೋಪ |
ವೇನಿದಾರೊಳೀ ಪ್ರತಾಪ |
ಹೀನಬುದ್ಧಿಯೆಸಗಬೇಡ | ಪ್ರಾಣಕಾಂತನೆ || ೧ ||

ನೀನಿದೆಲ್ಲಿ ಬಂದೆಯೆನ್ನೊ |
ಳೇನು ಕಾರ್ಯವಿಹುದು ಬುದ್ಧಿ |
ಹೀನತನವ ಕೇಳ್ವುದೆನ್ನೊ | ಳೇನು ಸಲಿಗೆಯೆ || ೨ ||

ಸಲಿಗೆಯ ಮಾತಲ್ಲವಿಂತು |
ಛಲವ ತಾಳ್ವುದಾರೊಳೆಂತು |
ತಿಳಿಯೆ ರಮಣನರುಹು ದಯದಿ | ಲಲನೆಯಲ್ಲವೆ || ೩ ||

ಲಲನೆಯಾದರೇನು ಪುರುಷ |
ರೊಲವನರಿಯಲೇಕೆ ರಾಜ್ಯಾ |
ಡಳಿತದಾ ವಿಚಾರದಲ್ಲಿ | ಕೆಲಸವೇನಿಲ್ಲಿ || ೪ ||

ಪತಿಯ ಕಷ್ಟಸುಖಗಳಲ್ಲಿ |
ಜೊತೆಯು ಸತಿಯ ಧರ್ಮವಿರಲು |
ಹಿತವೆ ಜರೆವುದೆನ್ನೊಳಿನಿತು | ಖತಿಯ ತಾಳ್ವರೆ || ೫ || 36 ||

**ಕೇದಾರಗೌಳ - ಝಂಪೆ**
ಕಾಮಿನೀಮಣಿಯೆ ಕೇಳು | ಧರ್ಮಸುತ |
ನೀ ಮಹೀತಳವಾಳಲು ||
ಕಾಮಪಿತನೆಂದನಂತೆ | ಯುವರಾಜ |
ನಾ ಮಾದ್ರಿತನಯನಂತೆ || ೧ ||

ಅತಿಥಿಸತ್ಕಾರವೆನಗೆ | ನಕುಲನಿಗೆ |
ಜೊತೆ ಮಂತ್ರಿಪದ ಭೀಮಗೆ ||
ಹಿತದಿ ಪುರರಕ್ಷೆಯನು ತಾ | ನೇಮಿಸಿಹ |
ಮತ ಸರಿಯಿದಲ್ಲವೆನುತ || ೨ ||

ವಾದಿಸುತ ನಾವೀರ್ವರು | ಒಪ್ಪದುಳಿ |
ದೀ ಧರೆಯನಿನ್ನಾದರು ||
ಭೇದವಿಲ್ಲದೆ ಹಸುಗೆಯ | ಕೇಳುತಿಹೆ |
ವೈದೆ ಬೇರಿರ್ಪ ಬಗೆಯ || ೩ ||

ಎನಲೆಂದಳರಸ ಕೇಳು | ಇನಿತಕೀ |
ಘನ ಕ್ರೋಧವೇಕೆ ತಾಳು ||
ಚಿನುಮಯನನುಜ್ಞೆಯಂತೆ | ಪೇಳಿದುದು |
ಸನುಮತವಿದಲ್ಲದೆಂತೆ || ೪ ||

ಸೋದರರು ನೀವೈವರು | ಇನಿತು ದಿನ |
ವಾದರೊಮ್ಮತವಿರ್ದರು ||
ಈ ದುರಾಗ್ರಹವನೀಗ | ಮಾಡುವದೆ |
ಭೇದ ಬಿಡಿ ತಾಳಿರೀಗ || ೫ || 41 ||

**ಸೌರಾಷ್ಟ್ರ - ತ್ರಿವುಡೆ**
ಬಿಡು ಬಿಡೀ ಮಾತುಗಳನೆನ್ನೊಳು |
ನುಡಿಯದಿರು ಪೇಳುವೆಯ ನೀತಿಯ |
ಕೊಡಲಿ ರಾಜ್ಯವ ಬಿಡೆನು ಸರ್ವಥ | ಜಡಜಗಂಧಿ || ೧ ||

ಸಾರು ಸಾರಿಲ್ಲಿಂದ ನಿಲ್ಲದಿ |
ರೂರ ಕೊಳ್ಳದೆ ಚಲಿಸೆ ಮನದ ವಿ |
ಚಾರ ಬೇರಿಹುದರಿಯೆನಗ್ರಜ | ಗೀ ರಸೆಯನು || ೨ ||

ಕೈಗೊಳಿಸಿದವರಾರು ಕುರುಕುಲ |
ಸಾಗರವ ಬರಿಗೈದುದೆಂಬುದ |
ನೀಗ ಮರೆತಿಂತರುಹಲುಚಿತವೆ | ನಾಗಗಮನೆ || ೩ ||

ಬಲ್ಲೆ ಮುಂದಹ ಪರಿಯನೆನ್ನೊಳು |
ಸೊಲ್ಲಿಸದಿರತಿ ನೀತಿಯನು ನಡೆ |
ನಿಲ್ಲದಿರು ಹೋಗೆನುತ ನೂಕಿದ | ವಲ್ಲಭೆಯನು || ೪ || 45 ||

**ವಾರ್ಧಕ**
ಅರಸ ಕೇಳೀ ತೆರದಿ ಸೌಭದ್ರೆ ನುಡಿಯ ಧಿ |
ಕ್ಕರಿಸಲಾ ಪಾರ್ಥನೈತಂದಗ್ರಜೆಗೆ ಕುಂತಿ |
ಯರಿಗೆ ಹರಿಯನುಜೆ ಸೂಚಿಸೆ ಕೇಳ್ದು ಬೆರಗಾಗಿದೇನು ವಿಸ್ಮಯವೆನ್ನುತ ||
ಹರಿಣಾಕ್ಷಿ ದ್ರುಪದನಂದನೆಯಾಗ ಕಾಂತನಿಂ |
ಗರುಹಿ ನೋಡುವೆನೆನುತ ಬರುತಿರಲ್ಕಣ್ಣನಂ |
ಜರೆದಾಡುತಿಹ ಭೀಮನಂ ನಿಲಿಸಿ ಕರವ ಮುಗಿದರುಹಿದಳು ನಯ ನೀತಿಯ || ೧ || 46 ||

**ಮಧುಮಾಧವಿ - ಏಕ**
ಸುಗುಣಾಭರಣ ಎನ್ನ ರಮಣ ನೀ ಕೇಳು |
ಬಗೆಯದಿರಿನಿತು ದ್ರೋಹವ ಸ್ವಲ್ಪ ತಾಳು ||
ನಗಧರನರಿತರಿನ್ನೇನ ಪೇಳುವನೊ |
ಜಗದೊಳಗಪಹಾಸ್ಯಕ್ಕೆಡೆಗೈವೆಯೇನೊ || ೧ ||

ಪಾಂಡುಸುತರು ಸತ್ಯಸಂಧರೆಂದೆನುತ |
ಗಂಡುಗಲಿಗಳು ಪ್ರಚಂಡರೆಂದೆನುತ ||
ಕೊಂಡ ಸತ್ಕೀರ್ತಿಯ ಬಿಡುವರೆ ಕಾಂತ |
ಭಂಡರಂದದಿ ಕಾರ್ಯಗೈವರ್ಯಾಕಿಂಥ || ೨ ||

ಪಿರಿಯಣ್ಣನೆಂದರೆ ಪಿತನಿಗೆ ಸರಿಯು |
ಇರಲವನಾಜ್ಞೆಯೊಳ್ ಸಲಹುವ ಹರಿಯು ||
ಗರುವದಿಂದಗ್ರಜನನು ಭಂಗಿಸುವದು |
ತರವಲ್ಲವೇಕತ್ವವಿರೆ ಖ್ಯಾತಿಯಹುದು || ೩ || 49 ||

**ಸುರುಟಿ - ಏಕ**
ಮಾನಿನಿಮಣಿ ಕೇಳೀ | ನೀತಿಯ |
ನೀ ನುಡಿಯದಿರೇಳೆ ||
ನಾನರಿತಿಹೆ ಪಿರಿಯಗ್ರಜ ಜನಕ ಸ |
ಮಾನನು ಎಂಬುದನೀದಿನ ಪರಿಮಿತ || ೧ ||

ಅಲ್ಲದಿರಲು ನಿನ್ನಾ | ಕೌರವ |
ರಲ್ಲಿ ಸಭೆಯ ಮುನ್ನ ||
ಎಲ್ಲ ವಸನವೆಳೆವುದನೀಕ್ಷಿಸಿ ಕ |
ಣ್ಣೊಲ್ಲದ ತೆರದಲಿ ಸಹಿಸಿದೆನ್ಯಾತಕೆ || ೨ ||

ದುರುಳನು ಕೀಚಕನ | ಭಂಗಕೆ |
ಮರುಗಲು ಬಳಿಕವನ ||
ತರುವನು ಕಿತ್ತಪ್ಪಳಿಸುವೆನೆಂದರೆ |
ಅರುಹಲು ಗುಪಿತದಿ ತಡೆದಿಹೆ ಸತ್ಯಕೆ || ೩ ||

ಇನಿತಿಂದಿನವರೆಗೆ | ಅಣ್ಣನ |
ಘನಸತ್ಯದ ನೆಲೆಗೆ ||
ದಣಿವನು ಸೈರಿಸಿ ಚರಿಸಿದೆ ಕಾನನ |
ನೆನಿತಾದರು ಪರಿಗಣಿಸದೆ ನುಡಿವರೆ || ೪ ||

ಪುರರಕ್ಷಣೆಗೆನುತ | ಎನ್ನೊಡ |
ನರುಹುವದೇನ್ ವಿಹಿತಾ ||
ಅರುಹಿದ ನುಡಿ ಧಿಕ್ಕರಿಸುವರಲ್ಲೆನು |
ತರುಹಿದರೆಲ್ಲಿಯವರೆಗಿದ ಸಹಿಸಲಿ || ೫ || 54 ||

**ಕೇದಾರಗೌಳ - ಅಷ್ಟ**

ಎರೆಯ ಕೇಳೆಮಗಿಂದೀ | ವರೆಗೆ ಕಷ್ಟವ ಪರಿ |
ಹರಿಸಿ ಕಾಪಾಡಿದಾತ ||
ಮುರಹರನಾತ ನಿಂ | ತರುಹಿರಲದ ನಿಮ |
ಗೊರೆದುದಲ್ಲವೆ ಭೂನಾಥ || ೧ || 55 ||

**ಮಾರವಿ - ಏಕ**

ಬಿಡು ಬಿಡು ಸಾಕಾ | ಜಡಜಾಂಬಕಗೆ |
ಮೊಡನರುಹಲು ಭಯವೆ ||
ಪೊಡವಿಪನೊಳು ನುಡಿ | ದಡಗಿದನೆಂಬುದು |
ಮಡದೀಮಣಿ ನಿಜವೆ || ೧ || 56 ||

**ಕೇದಾರಗೌಳ - ಅಷ್ಟ**

ಶಿರಕೆರೆದಿಹ ನೀರು | ಚರಣಕಿಳಿಯದುಂಟೆ |
ಹಿರಿಯನೊಳಿದ ಪೇಳ್ವರೆ ||
ಅರುಹಿ ಸೋದರರೊಳು | ಸರಿಪಡಿಸುವನೆಂಬ |
ಗುರಿಯೋಳ್ ನುಡಿದುದರರೆ || ೧ || 57 ||

**ಮಾರವಿ - ಏಕ**

ಯಾತಕೆ ಬೆಡಗಿನ | ಮಾತಾಡುವೆ ನಾ |
ವೀತನನರಿತಿಹೆವು ||
ಭೂತಳವಾಯ್ತು | ನ್ನೀತಕೆ ಸಹಜರು |
ಪೇತುಗರೆಂದೆನುತ || ೧ || 58 ||

**ಕೇದಾರಗೌಳ - ಅಷ್ಟ**

ವಲ್ಲಭ ಕೇಳಿಂಥ | ಸಲ್ಲದ ನುಡಿ ಒಳ್ಳಿ |
ತಲ್ಲ ಕೈ ಮುಗಿವೆನಿಂದು ||
ಬಲ್ಲವನಾಗಿ ಧ | ರ್ಮಜನ ದೂರಲು ತರ |
ವಲ್ಲ ಕೇಡಹುದು ಮುಂದೆ || ೧ || 59 ||

**ಮಾರವಿ - ಏಕ**

ಬಂದುದು ಬರಲದ | ನನುಭವಿಸುವೆ ಪೂ |
ರ್ಣೇಂದುವದನೆ ಕೇಳೆ ||
ಎಂದಿಗು ಧರೆಯಧಿ | ಕಾರವ ಪಡೆಯದೆ |
ಹಿಂದೆರಳೆನು ನಾಳೆ || ೧ || 60 ||

**ಭಾಮಿನಿ**

ಮರುತನಂದನನೆಂದ ಮಾತಿಗೆ |
ಮರುನುಡಿಯನೆನಲಾರದಂಗನೆ |
ಮರುಳುತನಕಿದ ಹರಿಯೆ ಬಲ್ಲನೆನುತ್ತ ಪಿಂತಿರುಗೆ ||
ಧರೆಯ ಭಾಗವ ಕೊಡಿಸದಿರ್ದಡೆ |
ಸರುವಥಾ ಬಿಡೆನೆಂದು ವಾದಿಸು |
ತಿರಲು ಕುಂತಿಯು ಮರುಗುತ್ತೈತಂದೊರೆದಳಣುಗಂಗೆ || ೧ || 61 ||

**ನಾದನಾಮಕ್ರಿಯೆ - ಅಷ್ಟ**
ಏನಯ್ಯ ಮರುತಸಂಜಾತನೆ | ನಿಮ |
ಗೇನು ಭ್ರಮೆಯೊ ಇಂದ್ರಜಾತನೆ ||
ಮಾನನಿಧಿಯು ಧರ್ಮಸಂಭವ | ಗವ |
ಮಾನ ಮಾಳ್ಪರೆ ಬಿಡಿಬೇಕೆನೆ ನಿಮ್ಮಯ || ೧ ||

ಅವಮಾನವೇನಿಲ್ಲವೆಮ್ಮಯ | ಭೂ ಭಾ |
ಗವನೀಯಬೇಕೆನೆ ನಿಮ್ಮಯ ||
ಕುವರನಾಡದೆ ಕುಳಿತಿಹನ್ಯಾಕೆ | ನೀವೆ |
ವಿವರಿಸಿ ತಿಳಿದರುಹಿರಿ ಸಾಕೆ || ೨ ||

ಯಾತಕೀ ದುರ್ಬುದ್ಧಿ ನಿಮಗಿಂತು | ಲಕ್ಷ್ಮೀ |
ನಾಥನಪ್ಪಣೆಯ ಶಿರದೊಳಾಂತು ||
ಈ ತನಕವು ಒಮ್ಮನದೊಳಿರ್ದು | ತಾಳ್ದ |
ಖ್ಯಾತಿಯ ಕಳೆವಿರೆ ಮದವೇರ್ದು || ೩ ||

ಮದವೆಮಗಿಲ್ಲವೀ ಧರಣಿಯ | ಪೊಸ |
ವಿಧದಾಳ್ವಿಕೆಯ ತೆರಕೆಮ್ಮಯ ||
ಹೃದಯಬೇಗುದಿಗೊಂಬುದದರಿಂದ | ಬೇರಿ |
ರ್ಪುದೆ ಲೇಸೆಂದೆನುತ ಕೇಳಿದೆವೆಂದ || ೪ || 65 ||

**ಭಾಮಿನಿ**
ಹರ ಹರಾ ನೀವ್ ಚಕ್ರವರ್ತಿಯ |
ತರಳರೆನಿಸುತ ಕಾಡೊಳುದಿಸುವ |
ಪರಿಯೆ ವನಸಂಚರಣೆಯೇ ಯೆಂದಿನಿತು ದಿನ ಮನದಿ ||
ಕೊರಗುತಿರಲದ ಪರಿಹರಿಸಿ ಮುರ |
ಹರನು ರಾಜಾಧೀಶರೆನಿಸಿದ |
ಹರುಷಗೊಂಡಿರಲೀಗ ನಿಮ್ಮೊಳು ಭೇದ ಮನಸಾಯ್ತೆ || ೧ || 66 ||

**ನೀಲಾಂಬರಿ - ಏಕ**
ಸುತರೇಳಿಗೆಯ ಬಯಸಿ | ದೆನ್ನಯ ಮನೋ |
ರಥವಾಯಿತೆಂದೆಣಿಸಿ ||
ಹಿತದಿಂದಿರಲು ನಿಮ್ಮೊಳು | ದುರ್ಬುದ್ಧಿ ಸಂಜ |
ನಿತವಾಯ್ತೆ ಇಂದಿನೊಳು || ೧ ||

ಯಾಕೆ ಧರಿತ್ರಿಯಲಿ | ಬಾಳಿರಲಿಂಥ |
ಕಾಕುತನಯರೊಗ್ಗಲಿ ||
ಶ್ರೀಕಾಂತನೀವರೆಗೆ | ಕಾಪಾಡಿದಾತ |
ಗೇಕೆ ನಿರ್ದಯವೊ ಹೀಗೆ || ೨ ||

ಬಿಡಿರಗ್ರಜನೊಳು ವಾದ | ಮಾಡುತ ಭೂಮಿ |
ಯೊಡೆಯದೆ ಮನದೊಳ್ ಭೇದ ||
ವಿಡದೊಮ್ಮತದೊಳಿರಲು | ಲೋಕದಿ ಕೀರ್ತಿ |
ಪಡೆವಿರೆಂದರುಹಿದಳು || ೩ || 69 ||

**ಸೌರಾಷ್ಟ್ರ - ತ್ರಿವುಡೆ**
ಮರುಗಲೇಕೌ ತಾಯೆ ನಿಮ್ಮಿಯ |
ತರಳರಾವಿರೆ ಹೀನವೃತ್ತಿಯ |
ನರುಹಿ ಮಾದ್ರೀತರಳರಿಗೆ ಮೇ | ಲಿರಿಸಬಹುದೆ || ೧ ||

ಕಡುಪರಾಕ್ರಮದಿಂದಲಣ್ಣಗೆ |
ಪೊಡವಿಯನು ಕೈಗೊಳಿಸೆ ಸಾಹಸ |
ನಡಸಿದವರಾರೆಂದು ತಿಳಿಯದೆ | ನುಡಿಯಬಹುದೆ || ೨ ||

ಇನಿತು ಭೇದಗಳಣ್ಣನಿಂದಲೆ |
ಜನಿಸಿರಲು ಬರಿದೆಮ್ಮ ಜರೆವಿರಿ |
ಯೆನಿತದಾಗಲು ನೋಳ್ಪ ತೆರಳಿರಿ | ಮನೆಗೆ ನೀವು || ೩ ||

ಯೆಂದು ಕುಂತಿಯ ಕಳುಹೆ ಮರುಗುತ |
ನಂದನರ ಗುಣವೆಣಿಸಿ ಮಾಧವ |
ನಿಂದ ಹೊರತನ್ಯರೊಳು ಸಾಗದಿ | ದೆಂದು ತೆರಳೆ || ೪ || 73 ||

**ವಾರ್ಧಕ**
ಧರಣಿಪಾಗ್ರಣಿ ಲಾಲಿಸಿಂತರಸಿಯರು ಮಾತೆ |
ಯರುಹಿದ ಹಿತೋಕ್ತಿಗಳು ಬರಿದೆ ನಿಷ್ಫಲಮಾಗೆ |
ವರ ಯುಧಿಷ್ಠಿರನು ಮುಂದೇಂ ಗೈವೆನೆಂದೆನುತ ಬೆರಗುಗೊಂಡಿರಲಿತ್ತಲು ||
ಹರಿತನುಜ ಪಾರ್ಥರುಭಯರು ಧರ್ಮಸಂಭವನೊ |
ಳೊರೆದರೇನಿದು ಮೌನ ಬಿಡೆವು ಕೊಡು ಸಾಮದಿಂ |
ಧರೆಯ ಭಾಗವನೆಂದು ವಾದಿಸುತ್ತಿರಲಿಲ್ಲಿಗಿಳಿದ ಸುರಮುನಿನಾಥನು || ೧ || 74 ||

**ಭೈರವಿ - ಅಷ್ಟ**
ಬಂದ ಮೌನೀಂದ್ರನನು | ಕಾಣುತ ಧರ |
ಣೀಂದ್ರ ಧರ್ಮಾತ್ಮಜನು ||
ಚಂದದಿ ಕರೆದುಪಚರಿಸುತ್ತಲಿರಲು ಮು |
ನೀಂದ್ರ ಕಂಡಿಂತೆಂದನು || ೧ ||

ಏನಯ್ಯ ಭೂಪ ನಿನ್ನ | ಮುಖಾಂಬುಜ |
ವೇನು ಬಾಡಿಹುದು ಮುನ್ನ ||
ಈ ನರ ಭೀಮರು ರೌದ್ರತೆಯಿಂದಿಹ |
ರೇನಿದು ವಿಸ್ಮಯವೋ || ೨ ||

ನೀರು ಪಾಲೆರಕವಾಗಿ | ಇರ್ಪಂದದಿ |
ವೀರರೈವರು ಒಂದಾಗಿ ||
ಸೇರಿಕೊಂಡಿರಲು ವಿಚಾರ ಬೇರಾದಂಥ |
ಕಾರಣವೇನೆಂದನು || ೩ || 77 ||

**ಭಾಮಿನಿ**
ಅವಧರಿಸು ಮುನಿನಾಥನೇ ಶ್ರೀ |
ಧವನರುಹಿದಂತಿನ್ನು ಮುಂದಕೆ |
ಯುವಜನಪ ಸಹದೇವ ನಕುಲನು ಮಂತ್ರಿ ಮರುತಜಗೆ ||
ಅವನಿರಕ್ಷಣೆಯತಿಥಿಸತ್ಕಾ |
ರವನು ಪಾರ್ಥನು ವಹಿಸಲೆಂದಿದ |
ನಿವರಿಗರುಹೆ ತಿರಸ್ಕರಿಸುತೆನ್ನೊಡನೆ ವಾದಿಪರು || ೧ || 78 ||

**ಸಾಂಗತ್ಯ - ರೂಪಕ**
ಸರಿಯಲ್ಲವೆಮಗಿಂದೀ ಪರಿ ಹೀನವೃತ್ತಿಯೊ |
ಳಿರೆವೀ ರಾಜ್ಯದೊಳೆಮ್ಮಂಶವನು ||
ಸರಿಭಾಗ ಕೊಡಿಸು ಬೇರಿಹೆವೆಂದು ವಾದಿಪ |
ರರುಹು ನೀ ಮುನಿಪ ನೀತಿಯನು || ೧ ||

ಅಹುದೇನೈ ಭೀಮ ಪಾರ್ಥರು ಬರಿ ದೇಶಕಾ |
ಗ್ರಹವ ತಾಳ್ವಿರಿ ಶಾಂತಿಗೊಳಿರಿ ||
ವಿಹಿತವಲ್ಲವು ದುರಾಗ್ರಹ ಬೇಡ ಪೇಳ್ವೆನೀ |
ಮಹಿಯ ವ್ಯರ್ಥದಿ ಭಾಗಿಸದಿರಿ || ೨ ||

ಸುಜನರು ಪಾಂಡುನಂದನರೆಂಬ ಕೀರ್ತಿಯ |
ತ್ಯಜಿಸಿ ಬಾಳುವ ಮನವ್ಯಾಕೆ ||
ಕುಜನರಂದದಿ ಧರ್ಮವನು ಮೀರಲಪಹಾಸ್ಯ |
ತ್ರಿಜಗದಿ ಬಹುದತಿ ಜೋಕೆ || ೩ ||

ಅನಿತು ನಿಮ್ಮಯ ಮನವೀ ಧರಿತ್ರಿಯ ಭಾಗ |
ವನು ಕೊಳ್ಳಬೇಕೆಂದರಿದನು ||
ದಿನವೇಳರಲಿ ಸಿಗುವಂತೆತ್ನಗೈವೆ ನೀ |
ವನಕ ಕೈಗೊಳಿ ಶಾಂತತೆಯನು || ೪ ||

ಯೆಂದು ಸಾಮದಿ ಭೀಮ ಪಾರ್ಥರ ಮನಸಿನ |
ದಂದುಗವನು ಪರಿಹರಿಸಿ ||
ನಂದನಂದನಗಿದನರುಹಿ ನೋಡುವೆನೆಂದು |
ಬಂದನು ಹರಿನಾಮ ಸ್ಮರಿಸಿ || ೫ || 83 ||

**ಕಂದ**
ಸುರಮುನಿಯೈತರುವದನುಂ |
ಕರುಣಾಕರನೀಕ್ಷಿಸುತ್ತಲೆದ್ದತಿ ಭರದಿಂ ||
ಕರೆತಂದಾಸನವೇರಿಸಿ |
ಪರಿಪರಿಯುಪಚರಣೆಯ ಗೈವುತಲೆಂದಂ || ೧ || 84 ||

**ಸುರುಟಿ - ಏಕ**
ಏನು ಬಂದಿರಿತ್ತ | ಮನದೊಳ |
ಗೇನು ಯೋಚಿಸುತ್ತ ||
ಮೌನಿವರ್ಯ ಪೊಸ | ತಾದ ವಿಚಾರಗ |
ಳೇನಿಹುದೈ ವಿಧಿ | ಮಾನಸಪುತ್ರನೆ || ೧ ||

ಕುಂಭಿನಿಯೊಳು ಚರಿಸಿ | ದುಷ್ಟರ |
ದಂಭವ ಹುರಿಗೊಳಿಸಿ ||
ಬೆಂಬಿಡದಳಿಸುತ | ಸಾಧುಜನರ ಪೊರೆ |
ವಿಂಬುಗೊಳಿಪ ಸುಜ | ನಾಂಬುಧಿ ಚಂದ್ರಮ || ೨ ||

ಕಾರಣವೇನಿರದೆ | ಬರುವ ಸ |
ವಾರಿಯೆ ನೀ ಬರಿದೆ ||
ಈ ರಸೆಯೊಳು ಪೊಸ | ವಾರತೆಯರಿತುದ |
ಭೋರನರುಹಿರೆನೆ | ನಾರದನೆಂದನು || ೩ || 87 ||

**ಮಧುಮಾಧವಿ - ಏಕ**

ಕೇಳೆನ್ನ ನುಡಿಯ ಶ್ರೀಲೋಲ ನೀ ಮುದದಿ |
ಪೇಳುವೆ ನಡೆದ ಸಂಗತಿಯ ವಿಸ್ತರದಿ ||
ಭೂಲಲನೆಯ ಪೊಂದಿದಾ ಯುಧಿಷ್ಠಿರನಾ |
ಪಾಲನೆಯ ನೋಡಲೈದಿ ಭೂವರನ || ೧ ||

ತಿಳಿಯೆ ಧರ್ಮಜನು ನಿನ್ನಾಜ್ಞೆಯ ತೆರದಿ |
ಇಳೆಯಾಳ್ವಿಕೆಯ ವಿಭಾಗಿಸೆ ಕೇಳಿ ಭರದಿ ||
ಚಲನಾತ್ಮಕಭವ ಪುರಂದರಜರೊಂದಾಗಿ |
ಛಲಗೊಂಡು ಧರ್ಮಸಂಭವನೊಳು ರೇಗಿ || ೨ ||

ಸರಿ ಹಸುಗೆಯ ಮಾಡಿ ಕೊಡಿಸೆಮ್ಮ ಭಾಗ |
ಇರುವೆವು ಪ್ರತ್ಯೇಕವೆಂದವರಾಗ ||
ಹರಿಯಾತ್ಮಭವನಣುಗನೊಳು ವಾದಿಸುತ |
ಇರಲನಿತರೊಳೈದಿ ಪೇಳ್ದೆ ನಾನಿನಿತ || ೩ ||

ತಾಳಿ ನಿಮ್ಮೊಳು ವಾದ ಬೇಡವೆಂದೆನುತ |
ಏಳು ದಿನದಿ ಸರಿ ಮಾಳ್ಪೆನೆಂದೆನುತ ||
ಪೇಳಿ ಶಾಂತತೆಗೈವುತಿಲ್ಲಿಗೈತಂದೆ ಶ್ರೀ |
ಲೋಲ ಮುಂದಿನಿಚ್ಛೆಯು ನಿನ್ನದೆಂದೆ || ೪ || 91 ||

**ಭಾಮಿನಿ**

ದೇವದೇವನೆ ಪಾಂಡುಸುತರ ಸ್ವ |
ಭಾವವಿಂತಹುದೆಂಬುದರಿಯೆನು |
ನೀವೊಲಿದ ಸದ್ಭಕ್ತರನು ಮದವಿಳಿಸಿ ಸದ್ವಿಧದಿ ||
ಕಾವ ಭಾರವು ನಿನ್ನದೆನುತಲಿ |
ದೇವಮುನಿಯಿಂತರುಹಿ ತೆರಳಲು |
ಶ್ರೀವರನು ಯೋಚಿಸುತ ತನ್ನೊಳಗೆಂದನೀ ತೆರದಿ || ೧ || 92 ||

**ವಾರ್ಧಕ**

ಅಹಹ ಭೀಮಾರ್ಜುನರಿಗೀ ತೆರದಿ ತಮ್ಮಿಂದ |
ಸಹಸಿಗಳ ಕಾಣೆವೀ ಧರಣಿಯಂ ಧರ್ಮಜಗೆ |
ಬಹು ಪರಾಕ್ರಮದಿ ಕಾದಾಡಿ ಕೈಗೊಳಿಸಿದವರಾವೆಂಬ ಮದವೇರಿತೆ ||
ವಿಹಿತವಾಯ್ತವರ ಮದವಿಳಿಸಲ್ಕಿದೇ ಸಮಯ |
ವಹುದೊಂದುಪಾಯಮಂ ಗೈವೆನಿದಕೆಂದೆನುತ |
ಲಹಿರಾಜಶಯನ ಹಲಧರನ ನೋಳ್ಪಾತುರದೊಳೈತಂದನತಿ ಜವದಲಿ || ೧ || 93 ||

**ಸೌರಾಷ್ಟ್ರ - ತ್ರಿವುಡೆ**

ವೈಭವದೊಳೋಲಗದೊಳಿರೆ ಬಲ |
ನಾ ಬಲಾರಿಯ ತೆರದಿ ಪಂಕಜ |
ನಾಭನೈತಂದಣ್ಣನಂಘ್ರಿಸ | ರೋಜಕೆರಗೆ || ೧ ||

ಹೀಗೆ ಬಾರೈ ತಮ್ಮ ಕುಳಿರು ಸ |
ರಾಗದಿಂದೆನುತಪ್ಪಿ ತೋಷದೊ |
ಳಾ ಗರುಡವಾಹನನ ಮನ್ನಿಸು | ತಾತಗೆಂದ || ೨ ||

ಬರವಿದೇನೈ ಕೃಷ್ಣ ನಿನ್ನಯ |
ಬರ ವಿಶೇಷವಿದಾಯ್ತು ಬಂದಿಹ |
ಪರಿಯನರುಹೆನೆಲೊರೆದನಾ ಹಲ | ಧರನಿಗೆರಗಿ || ೩ || 96 ||

**ಜಂಜೂಟಿ - ಅಷ್ಟ**

ಮುಷ್ಟಿಕಾಂತಕ ಲಾಲಿಸಯ್ಯ | ನಿನ್ನೊ |
ಳಷ್ಟೊ ಪೇಳುವೆನು ಕೇಳಯ್ಯ ||
ದುಷ್ಟರಂದದಿ ಭೀಮಪಾರ್ಥರಗ್ರಜನೊಳ್ ಸ |
ಮಷ್ಟಿ ಧರೆಯಲಿ ಭಾಗಕೊಡಿಸೆಂ |
ದಿಷ್ಟು ವಾದಿಪರಂತೆ ಮದದಲಿ || ೧ ||

ಯುವರಾಜ ಸಹದೇವನೆಂದು | ಮಂತ್ರಿ |
ಯುವಕ ನಕುಲ ಭೀಮಗೆಂದು ||
ಅವನಿರಕ್ಷಣೆ ನರಗತಿಥಿಸತ್ಕಾರವೆಂ |
ದವನಿಪನೊಳಾನೆಂದ ವಚನವ |
ನಿವರಿಗೆನೆ ಖತಿಗೊಂಡು ವಾದಿಸಿ || ೨ ||

ಧರೆ ವಿಭಾಗಿಸಿ ಕೊಡಿಸೆನುತಾ | ಯುಧಿ |
ಷ್ಠಿರನೊಳ್ ವಾದಿಸುತಿರಲನಿತಾ ||
ಸುರಮುನಿಯನಿತರೊಳೈದಿ ಏಳ್ಗಿನದಿ ನಾ |
ಸರಿಗೊಳಿಪೆನೆಂದರುಹಿ ಶಾಂತತೆ |
ವೆರಸಿ ಬಂದೆನಗೊರೆದು ತೆರಳಿಹ || ೩ ||

ಅದರಿಂದ ಪಾಂಡವರೆಡೆಗೆ | ಪೋಗು |
ತಿದಕೊಂದೆತ್ನವ ಮಾಡಿ ಕಡೆಗೆ ||
ಕದನವಾಗದ ತೆರದಲಿ ಗರ್ವವಿಳಿಸಿ ಮುಂ |
ದಿದೆ ಧರಿತ್ರಿಯ ಭಾಗವೆಮಗೆಂ |
ಬುದ ನಿಲಿಸಿಬರಲೇಳಿರೆನ್ನಲು || ೪ || 100 ||

**ವಾರ್ಧಕ**

ಚಿತ್ರಜನ ಪಿತ ಕೇಳು ಪಾಂಡುನಂದನರ ನೀ |
ಹೊತ್ತುಕೊಂಡಿಲ್ಲಿ ಪರಿಯಂತ ಮೂಲೋಕದೊಳ |
ಗತ್ಯಧಿಕ ವೀರ ಧರ್ಮಾತ್ಮ ಸಜ್ಜನರೆಂದು ಕೊಂಡಾಡಿ ಮದವೇರ್ದುದು ||
ಉತ್ತಮದ ರೀತಿಯಂದೊರೆದು ನೀ ಬಂದಿಹುದ |
ಪಥ್ಯವಾಯ್ತುವರಿಗದರಿಂದವರ ಗರ್ವಮಂ |
ನಿತ್ಯಾತ್ಮ ನೀನೆ ಮುರಿವದಕೊಂದುಪಾಯಮಂ ನಿರ್ಧರಿಸಿ ಪೇಳೆಂದನು || ೧ || 101 ||

**ನವರೋಜು - ಏಕ**

ಯಾದವವಂಶಲಲಾಮ | ನೀ |
ನಾದರಿಸೈ ಬಲರಾಮ ||
ಮೋದದೊಳಿದಕೊಂದೆತ್ನವ ಗೆಯ್ಯುವೆ |
ನೀ ದಯದೊಳು ಸಹಕರಿಸುವುದೆಂದನು || ೧ ||

ಉರಗನ ರೂಪವ ನೀನು | ಮಿಗೆ |
ಧರಿಸುವದೈ ವಿನತಜನು ||
ತುರಗವು ಮಾಯೆಯು ಮೋಹಿನಿರೂಪದಿ |
ಇರಲಡವಿಯೊಳ್ ನಾ ಗಾರುಡಿಯಾಗುವೆ || ೨ ||

ಮುಂದಿನ ಕಾರ್ಯವನೆಲ್ಲಾ | ನಾ |
ನಂದದಿ ಗೆಯ್ಯುವೆನಲ್ಲ ||
ಇಂದಿದಕಭಿಮತವೇನೆನೆ ಹಲಧರ |
ನೆಂದನು ನಿನ್ನಭಿಮತದಂತಾಗಲಿ || ೩ || 104 ||

**ಭಾಮಿನಿ**
ಹಲಧರನ ಮತಗೊಂಡು ಮಾಯಾ |
ಲಲನೆ ಗರುಡರಿಗರುಹಿ ತುರಗವ |
ನೆಲರಶನ ಸಹಿತಾಗ ಕೂಡುತ ಗಾರುಡಿಗನಾಗಿ ||
ಖಳಕುಲಾಂತಕ ಪೊರಟು ಧರ್ಮಜ |
ನಿಳೆಯ ಸೇರುತಲಾಟವಾಡುತ |
ನಲವಿನಿಂದರಮನೆಗೆ ಬರೆ ಚರರೆಂದರವನಿಪಗೆ || ೧ || 105 ||

**ಮುಖಾರಿ - ಏಕ**
ರಾಜಾಧಿರಾಜ ಲಾಲಿಸಯ್ಯ | ಸಜ್ಜನಸುರ |
ಭೂಜಕೃಪಾಬ್ಧಿ ಪಾಲಿಸಯ್ಯ ||
ಮಾಜದೆ ನಿಮ್ಮ | ಪ್ಪಣೆಯೊಳು ನಾವ್ ಮಿಗೆ |
ರಾಜದ್ವಾರದಿ | ಕಾದಿರಲೋರ್ವನು |
ರಾಜಿಪ ಗಾರುಡಿ | ಯೈತಂದಿಹ ಮಹ |
ರಾಜರ ದರ್ಶನ | ವಾಗುವಡೆನ್ನುತ || ರಾಜಾಧಿ || ೧ ||

ಪರಿಪರಿಯಾಟ ಬಲ್ಲನಂತೆ | ಊರಿನೊಳೆಲ್ಲ |
ತಿರುಗಿ ಪ್ರಖ್ಯಾತಿಗೊಂಡನಂತೆ ||
ಅರಸನಿದಿರು ತಾ | ನರಿತಿಹುದೆಲ್ಲವ |
ನರುಹಿ ಮೆರೆಸಿ ಸಭೆ | ಬೆರಗುಗೊಳಿಪ ಮನ |
ವಿರಿಸುತ ಬಂದಿಹ | ದೊರೆ ನಿಮ್ಮಾಜ್ಞೆಯ |
ನಿರುಕಿಸುತಿಹನ | ಪ್ಪಣೆಯರುಹೆನ್ನಲು || ೨ || 107 ||

**ಕಂದ**
ಚಾರಕರೆಂದುದ ಕೇಳುತ |
ಧಾರಿಣಿಪತಿ ಬರಹೇಳೆಂದೊರೆಯಲ್ ಮುದದಿಂ ||
ಸಾರುತ ಚಾರಕನರುಹಲು |
ಗಾರುಡಿಯೈತಂದವನಿಪಗೆರಗುತ ನುಡಿದಂ || ೧ || 108 ||

**ಕಾಪಿ - ಅಷ್ಟ**
ವಡಿಯ ಕೈಮುಗಿವೆ ಪರಾಕು | ಧರ್ಮ |
ದೊಡಿಯರೆನ್ನಯ ನುಡಿಯವಧರಿಸ್ಬೇಕು || ವಡಿಯ || ಪ ||
ಊರೂರ ತಿರುಗುತ ಬಂದ್ವಿ | ನಿಮ್ಮ |
ಊರೊಳಾಟವ ತೋರಿ ಬಹುಮಾನ ತಂದ್ವಿ ||
ಊರೊಡೆಯರ್ಗೊಮ್ಮೆ ತೋರಿ | ನಮ್ಮ |
ಊರತ್ತ ಪೋಗಬೇಕೆಮ್ಮಂದೆ ಸಾರಿ || ೧ ||

ಊರೆಮಗಾಯ್ತು ಬೌ ದೂರ | ನಮ್ಮ |
ಊರಾಗಾಯ್ಕಂಡ್ ಕಂಡ್ರೆ ಸುತ್ಲು ಸಮ್ದೂರ ||
ಯಾರೂ ಫಕ್ಕನೆ ಬಪ್ಕೆಯಡಿಯ | ಅಂಥ |
ಊರಿಂದ ಪೊರಟಿಲ್ಲಿ ಬಂದೆವ್ನಮ್ಮೊಡಿಯಾ || ೨ ||

ಕೆಟ್ಟವು ಕಂಡ್ರೆನಗಾಗ | ನೀವ್ಧ |
ರ್ಮಿಷ್ಠರೆಂಬುದ ಕೇಳಿ ಬಂದೆವ್ನಾವೀಗ ||
ಇಷ್ಟೆಲ್ಲ ಜನರೆದ್ರಿನಾಗೇ | ನಾ ಕ |
ಲ್ತಷ್ಟಾಟವಾಡುವ ಮನ್ಸ್ಯತೆ ಹ್ಯಾಗೆ || ೩ ||

ಏನಾಟವಿದೆ ನಿನ್ನೊಳೀಗ | ಮಾಳ್ಪು |
ದೀ ನಮ್ಮ ಸಭೆಯವರೀಕ್ಷಿಸಲೀಗ ||
ನೀನರಿತಿಹ ಚಮತ್ಕಾರ | ವಿದ್ಯ |
ವೇನಿದ್ದರಳುಕದೆ ತೋರಿಸೈ ಶೂರ || ೪ ||

ಆಯ್ತಪ್ಪ ನೋಡಿ ಹಾಂಗಾದ್ರೆ | ಎನ್ಗೊ |
ಳೈತಪ್ಪ ದೊಡ್ಡದೊಂದ್ಹಾವಿದ ನೆಗದ್ರೆ ||
ಸೋತೆ ನಾನವರ್ನೆಗೆದಿದ್ರೆ | ಪಂಥ |
ವೋತು ಮಾಡ್ಬರಲಿ ಸಭೆಯೊಳಂಥವ್ರಿದ್ರೆ || ೫ || 113 ||

**ಮಾರವಿ - ಏಕ**
ಗಾರುಡಿಯೆಂದುದ ಕೇಳುತ ರೋಷದಿ |
ಮಾರುತಸಂಭವನು ||
ಶೂರಾಗ್ರೇಸರರಿನಿತಿರಲಿಂತ ವಿ |
ಚಾರದಿ ಪೇಳುವರೆ || ೧ ||

ಶತಗಜಬಲನೆನ್ನಧಟನರಿಯೆ ನೀ |
ಕ್ಷಿತಿಯೊಳು ಉರಗವಿದು ||
ಅತಿಶಯವೇ ಬಿಡು ನೆಗಹದಿರಲ್ಕೆ ಶ |
ಪಥವಿದ ಕೇಳೆಂದ || ೨ ||

ಎನ್ನಂಶಕೆ ಬಹ ಸಕಲ ಧರಿತ್ರಿಯ |
ನಿನ್ನೊಶಗೆಯ್ಯುವೆನು ||
ಇನ್ನಿದಕೆಷ್ಟಕು ತಪ್ಪೆನೆನುತ ಭುಜ |
ವನ್ನಪ್ಪಳಿಸಿದನು || ೩ || 116 ||

**ಭಾಮಿನಿ**
ಮಾರುತಿಯ ನುಡಿ ಕೇಳಿ ನಗುತಲಿ |
ಗಾರುಡಿಯು ಬಿಡಲುರಗನನು ಮದ |
ವೇರಿ ನೆಗಹಲ್ಕಿಳೆಯ ಬಿಡದಿರಲತುಳ ವಿಕ್ರಮದಿ ||
ಭೂರಿಬಲನಿನ್ನೊಮ್ಮೆ ಯತ್ನಿಸ |
ಲಾರದಿರಲಹಿ ಭೀಮನನು ಬಿಗಿ |
ದೋರುಗುಡಿಸಲ್ಕನಿಲಜನು ಕಂಗೆಡುತಲಿಂತೆಂದ || ೧ || 117 ||

**ನೀಲಾಂಬರಿ - ಏಕ**
ಆರೊ ಗಾರುಡಿಯೆ ನೀನು | ಬಿಡಿಸುಯೆನ್ನ |
ಕ್ರೂರ ಸರ್ಪನೊಳ್ ನೊಂದೆನು ||
ಗಾರುಗೆಟ್ಟೆನು ಬರಿದೆ | ಗರ್ವದಿ ಪಂಥ |
ವಾರೆಂದರಿಯದೆ ಗೈದೆ || ೧ ||

ಸಾಕಿನ್ನು ಬಿಡಿಸದಿರೆ | ಯೆನ್ನಯ ಜೀವ |
ತೇಕುವದಿನಿತಾದರೆ ||
ಶ್ರೀಕಾಂತ ಮುನಿದನೇನೊ | ಅಲ್ಲದಡಿಂಥ |
ಕಾಕುಸರ್ಪನೋಳ್ ಸೋಲ್ವೆನೊ || ೨ ||

ಎಂಥೆಂಥ ಬಲವಂತರಾ | ಯುದ್ಧದಿ ಗೆಲ್ವ |
ಪಂಥವ ಗೈದ ವೀರ ||
ಇಂತಾಯ್ತೆ ಗತಿಯೆನಗೆ | ಗರ್ವದಿ ರಾಜ್ಯ |
ವಂ ತಾನೆ ಕಳೆದೆ ಹೀಗೆ || ೩ || 120 ||

**ಕಂದ**
ಅನಿಲಜನಿರವಂ ಕಾಣುತ |
ಜನಪತಿಸಭೆಯೊಳಗೆಲ್ಲರು ವಿಸ್ಮಯಪಡುತಂ ||
ಇನಿತೇನ್ ಚೋದ್ಯವೊ ಯೆನುತಿರೆ |
ಘನತರ ಹಾಸ್ಯದಿ ಜರೆಯುತ ಗಾರುಡಿ ನುಡಿದಂ || ೧ || 121 ||

**ಪುನ್ನಾಗತೋಡಿ - ಅಷ್ಟ**
ಆಯಿತೇ | ಪಂಥ | ವಾಯಿತೇ || ಪ ||
ಆಯಿತೆ ಛಲ ಬರಿ | ಬಾಯಡಂಬಕತನ |
ವೇಯೆಂದು ನೆರೆದಿರ್ದ | ರಾಯಸಭೆಯ ಇದಿ || ರಾಯಿತೇ || ಅ ||
ಹುಲುನಾಗವಿದನೆತ್ತದವನು | ಭುಜ |
ಬಲನೆಂದು ಪೊಗಳಲಿನ್ನಾರು ನಂಬುವನು ||
ಛಲವಂತನಿಳೆಯ ಪಾಲಿಪೆನು | ಎಂಬ |
ಬಲುಹಡಗಿತೆ ಸಾಕು ಬಿಡಿಸುವೆನಿದನು || ಆಯಿತೇ || ೧ ||

ನಿನ್ನಂಶದಿಳೆಯೆನಗಾಯ್ತು | ಮುಂದಿ |
ನ್ನಣ್ಣನ ಸೇರಿಕೊಂಡಿಹ ಬಾಳ್ವೆಯಾಯ್ತು ||
ಪನ್ನಿಪಂಥಗಳೆಲ್ಲ ಹೋಯ್ತು | ಬಿಡು |
ಇನ್ನು ಗರ್ವವು ಸಲ್ಲದೆನ್ನೊಳಗಾಯ್ತು || ೨ ||

ಬಿಡಿಸುವೆ ಬಂಧನವೆನುತ | ಲದ |
ಬಿಡಿಸಿ ಮತ್ತೆಂದನಿನ್ನಾರಾದಡಿನಿತ ||
ಬಿಡದೆತ್ತಲಿಕ್ಕೀಗೆನ್ನೊಳಾದ | ರಾಜ್ಯ |
ವಡನೀವೆನೆನಲಾ ನಕುಲನಿದಿರಾದ || ೩ || 124 ||

**ಸೌರಾಷ್ಟ್ರ - ತ್ರಿವುಡೆ**
ಗಾರುಡಿಯೆ ಕೇಳೊಮ್ಮೆ ಭೀಮನ |
ಭೂರಿಬಲವನು ಸೆಳೆದನೆಂಬಹಂ |
ಕಾರ ಬಿಡು ನೋಡೆನ್ನ ಸತ್ತ್ವ ವಿ | ಚಾರವನ್ನು || ೧ ||

ಎಂದೆನುತಲಾ ನಕುಲನಾಗ ಮು |
ಕುಂದನಂಘ್ರಿಯ ನೆನೆದು ಉರಗನ |
ನಂದು ನೆಗಹಲು ನೆರೆದ ಸಭೆ ಭಳಿ | ರೆಂದು ಹೊಗಳೆ || ೨ ||

ಕಂಡು ಗಾರುಡಿ ನುಡಿದ ಹರುಷದಿ |
ಗಂಡುಸಹುದೈ ಭಳಿರೆ ಮೆಚ್ಚಿದೆ |
ಕೊಂಡ ರಾಜ್ಯವ ನಿನಗೆ ಬಿಟ್ಟೆ ಪ್ರ | ಚಂಡನೆನುತ || ೩ ||

ಹೊಗಳೆ ಮರುತಜ ನಾಚಿ ಹಿಂದಕೆ |
ತೆಗೆಯೆ ಗಾರುಡಿ ನುಡಿದನಾಟದ |
ಬಗೆಯು ಬೇರೊಂದಿಹುದು ತುರಗವಿ | ದಗಡುತನದಿ || ೪ ||

ಏರಿ ತನ್ನಿಚ್ಛೆಯೊಳು ಮೆರೆವ ಸ |
ವಾರನಿರೆ ಬರಲೆಂದು ಸೂಚಿಸೆ |
ವೀರ ಫಲುಗುಣನೆದ್ದು ಘನ ಗಂ | ಭೀರದಿಂದ || ೫ || 129 ||

**ಭಾಮಿನಿ**

ಗಾರುಡಿಯೆ ಕೇಳೀಗ ತುರಗವ |
ನೇರಿ ಬರುವದಿದಾವ ದೊಡ್ಡಿತು |
ವೀರರಿಗೆ ಬಿಡು ಸಾಕು ಗಳಹದಿರೆನುತ ಫಲುಗುಣನು ||
ಸಾರಿ ಮುಂದಕೆ ತುರಗದೆಡೆಗೆ ಸ |
ವಾರಿ ಗೆಯ್ಯಲು ಚಿಗಿದು ಗಗನಕೆ |
ಹಾರಲದ್ಭುತವೇನೆನುತ ಬೆರಗಾಗೆ ಸಕಲ ಜನ || ೧ || 130 ||

**ಕಂದ**

ನರನಿಂತಭ್ರದಿ ಸಾರಲ್ |
ಪರಿಕಿಸಿ ಗಾರುಡಿಯವನಿಪನೊಡನಿಂತೆಂದಂ ||
ಚರಿಸಿದ ಹಯ ಬರುವನ್ನೆಗ |
ಬರುವೆನು ತಾನೆನುತಡಗಲು ವಿಸ್ಮಯದಿಂದಂ || 131 ||

**ಮಾರವಿ - ಏಕ**

ಧರಣಿಪ ಕೇಳಾ | ತುರಗವು ಗಗನಾಂ |
ತರದೊಳು ಚರಿಸುತ | ಬರುತಿರೆ ವೇಗದಿ |
ನರನಿದನೀಕ್ಷಿಸಿ | ಬೆರಗಾಗುತ ಭಯ |
ವೆರಸಿ ನಡುಗೆ ತ | ನ್ನಿರವೇನೆನುತ || ಏನನೆಂಬೆ || ೧ ||

ಏನಿದು ವಿಸ್ಮಯ | ವೀ ನವತುರಗವ |
ಕಾಣೆನಿನಿತು ದಿನ | ವೇನಹುದೆಂದನು |
ಮಾನದೊಳಿರೆ ಘನ | ಕಾನನದೊಳು ಹರಿ |
ಸೂನುವ ಕೆಡಹುತ | ತಾನಡಗಿದುದು || ಏನನೆಂಬೆ || ೨ || 133 ||

**ವಾರ್ಧಕ**

ನಿಬಿಡವಾಗಿಹ ತರುಲತಾದಿಗಳ ಕಾನನದೊ |
ಳಿಭವಾಹನನಣುಗನಂ ಕೆಡಹೆ ಮೂರ್ಛಿಸುತೆದ್ದು |
ನಭಕಡರಿದಿನಬಿಂಬದುರುಬೇಗೆಯಿಂ ಬಳಲಿ ಬಾಯಾರಿ ಬೆಂಡಾಗುತ ||
ಇಭಪುರಿಯದೆತ್ತ ತಾನೆತ್ತ ತುರಗವಿದೆತ್ತ |
ಲಬುಜನಾಭನ ಕರುಣವೆತ್ತಡಗಿತೆನುತಲಿ ಹ |
ಲುಬುತಿರಲಿಕ್ಕೆತ್ತ ಮಾಯಾಮೋಹಿನಿಯು ನಗುತಲೈತಂದಳೇವೇಳ್ವೆನು || ೧ || 134 ||

**ಬೇಗಡೆ - ತ್ರಿವುಡೆ**
ಮಂದಗಾಮಿನಿ ನಡೆ | ತಂದಳೋಲಾಡಿ |
ಮಂದಮಾರುತ ಸ್ಮರ | ರಿಂದೊಡಗೂಡಿ |
ಕುಂದಕುಸುಮ ಸುಮಗಂಧವೀಡಾಡಿ |
ಚಂದದಿಂದೊನಪು ವೈಯ್ಯಾರದ ಮೋಡಿ ||
ಯಿಂದ ನೋಡುವ ವಿಟಜನರು ಬೆರ |
ಗಿಂದ ಮೋಹಿಪ ವಿಮಲತನು ಹೊಳ |
ಪಿಂದ ನಸುನಗೆಯಿಂದ ಶೋಭಿಸು |
ತಿಂದುಮುಖಿ ನಲವಿಂದ ಮೋದದಿ || ೧ || 135 ||

**ಕಂದ**
ಅಂಗಜನರಗಿಣಿಯಂದದಿ |
ಶೃಂಗಾರದಿ ಬಹ ತರುಣಿಯ ನೋಡುತ ವಿಜಯಂ ||
ಅಂಗದ ಶ್ರಮವನ್ನುಳಿದು ಕು |
ರಂಗಾಕ್ಷಿಗೆ ಮರುಳಾಗುತ ತನ್ನೊಳು ನುಡಿದಂ || ೧ || 136 ||

**ಯಮುನಾ ಕಲ್ಯಾಣಿ - ಅಷ್ಟ**
ಅಹಹಾ ಇನ್ನೆನಿತು ಸುಂದರಿ ಈಕೆ | ಇಲ್ಲ |
ಮಹಿಯೊಳಗಿನಿತು ಚೆಲುವಿನಾಕೆ || ಪ ||
ಮನುಮಥನರಗಿಣಿಯಂತಿಹಳು | ನೋಡ |
ಲನುಪಮಲಾವಣ್ಯವಾಂತಿಹಳು ||
ಕನಕಪುತ್ಥಳಿಯಂತೆ ಹೊಳಪಿನೊಳು | ಇರ್ಪ |
ವನಿತಾಮಣಿಯು ಇವಳ್ಯಾರಿವಳು || ೧ ||

ಈ ತಳೋದರಿಯ ನಿರ್ಮಿಸಲಿನ್ನು | ಪದ್ಮ |
ಜಾತನೆಂತಾಂತನೊ ಶ್ರಮವನ್ನು ||
ಮಾತಿಂದರುಹಿ ಫಲವೇನಿವಳ | ನೋಡಿ |
ಸೋತುಹೋಗದ ನರರತಿ ವಿರಳ || ೨ ||

ಘೋರ ವಿಪಿನವಿದರೆಡೆಗಾಗಿ | ಬಂದ |
ಕಾರಣವೆಲ್ಲ ವಿವರವಾಗಿ ||
ಸಾರಿ ನಾ ತಿಳಿದು ನೋಡುವೆನೆಂದು | ಮನ |
ವೇರಿ ಪಾರ್ಥನು ಕೇಳ್ದನಿಂತೆಂದು || ೩ || 139 ||

**ಮುಖಾರಿ - ಏಕ**
ಯಾರೇ ಭಾಮಿನಿ ಸುಂದರಾಂಗಿ | ಗಜಗಮನೆ ಲತಾಂಗಿ |
ತೋರೇ ನಿನ್ನಾನನ ಕೋಮಲಾಂಗಿ ||
ಘೋರ ವಿಪಿನವಿದ | ಸಾರಿದ ಬಗೆಯೇ |
ನೂರೆಲ್ಲಿದೆ ಮದ | ವಾರಣಗಾಮಿನಿ || ಯಾರೇ || ೧ ||

ಸುಮಕೋಮಲಾಂಗಿ ನಿನ್ನ ನೋಡಿ | ಭ್ರಮೆಗೊಂಡೆನು ಖೋಡಿ |
ಸುಮಶರನೆನ್ನೊಳ್ ನಿರ್ದಯ ಮಾಡಿ ||
ಸುಮಬಾಣವನೆದೆ | ಗಮರಿಸಿ ಬಿಡುತಿಹ |
ನಮಮ ಸಹಿಸೆ ನೀ | ಶಮಿಸೆಲೆ ಮೋದದಿ || ಯಾರೇ || ೨ ||

ಭೃಂಗಕುಂತಳೆ ಪದ್ಮಗಂಧಿ | ನಿನ್ನನು ಪೊಂದಿ |
ಸಂಗಸುಖವಗೊಳ್ಳಲೆಂದೀ ||
ತುಂಗವಿಪಿನದಿ ತು | ರಂಗವು ಕೆಡಹಿದ |
ಸಂಘಟನೆಯು ಶ್ರೀ | ರಂಗನ ಲೀಲೆಯು || ಯಾರೇ || ೩ || 142 ||

**ಕಂದ**

ಎಂದೀ ತೆರ ಬಹು ವಿಧದಿಂ |
ಕಂದರ್ಪನ ಬಾಧೆಗೆ ಗುರಿಯಾಗುತ ವಿಜಯಂ ||
ಸುಂದರಿಯಂ ಬೆಸಗೊಳುತಿರೆ |
ಮಂದಸ್ಮಿತವದನದಿ ಮಿಗೆ ನುಡಿದಳ್ ಬೆಡಗಿಂ || ೧ || 143 ||

**ಜಂಜೂಟಿ - ಅಷ್ಟ**

ಸುರಲೋಕದಬಲೆ ಕೇಳ್ ನಾನು | ಭೂ ಸಂ |
ಚರಿಸುವ ಮನದಿ ಬಂದಿಹೆನು ||
ನರನೆ ನೀನ್ಯಾರೆನ್ನ ಬರಿದೆ | ಯೋಚನೆ ಗೈವೆ |
ಪುರವದಾವೆಡೆ ಘೋರ ವಿಪಿನಕೆ |
ತೆರಳಿ ಬಂದಿಹ ಪರಿಯನರುಹಿಸು || ೧ || 144 ||

**ಕೇದಾರಗೌಳ - ಝಂಪೆ**

ಹರಿಣಾಕ್ಷಿ ಕೇಳೆ ರಮಣಿ | ಪೇಳ್ವೆ ಕರಿ |
ಪುರದರಸು ಸದ್ಗುಣಮಣಿ ||
ವರ ಧರ್ಮತನಯನನುಜ | ಪಾರ್ಥನೆಂ |
ಬರು ವನಕೆ ಬಂದೆ ಸಹಜ || ೧ || 145 ||

**ಜಂಜೂಟಿ - ಅಷ್ಟ**

ಬಲ್ಲೆ ನಾ ಪಾರ್ಥನ ಪರಿಯ | ಸುರ |
ದಲ್ಲಣನೆಡೆಗೈದುದರಿಯ ||
ಅಲ್ಲಿ ಶಚೀಂದ್ರನಪ್ಪಣೆಯಿಂದಲೂರ್ವಶಿ |
ಯಲ್ಲಿ ಮನವಿಡದವಳ ತ್ಯಜಿಸಿದ |
ನಿಲ್ಲಿ ಭ್ರಮೆ ಯಾಕೆನ್ನೊಳಾದುದು || ೧ || 146 ||

**ಕೇದಾರಗೌಳ - ಝಂಪೆ**

ಸತಿ ಶಿರೋಮಣಿಯೆ ಕೇಳು | ಊರ್ವಶಿಯು |
ಪಿತನಿಂದ್ರನಿಗೆ ಸಲುವಳು ||
ಹಿತವಲ್ಲವೆನಗೆಂಬುದ | ಗ್ರಹಿಸಿದೆನು |
ಮತವೇನು ನೀ ಪೇಳ್ವುದಾ || ೧ ||

ಬೇಡ ಬೇಡೆನ್ನೊಳಿಂತು | ಮನವ ನೀ |
ಮಾಡದಿರು ಭ್ರಮೆಯನಾಂತು ||
ಕೇಡಹುದು ಮುಂದೆ ನಿನಗೆ | ಸುಖವಿಲ್ಲ |
ವಾಡಿ ಕಳೆದಿಹೆನೊಮ್ಮೆಗೆ || ೨ ||

ಕಷ್ಟವೆನಿತಾದಡದನು | ಸಹಿಸಿಕೊಂ |
ಡಿಷ್ಟ ಪಾಲಿಪೆ ನಿನ್ನನು ||
ಇಷ್ಟಕಂಜದಿರು ನೀನು | ಹಿಡಿ ನಂಬು |
ಕೊಟ್ಟೆ ತವ ವಾಂಛಿತವನು || ೩ ||

ಪರ ತರುಣಿಯರೊಳು ಮನವ | ನಿಟ್ಟ ಘನ |
ಪುರುಷರಾದರು ಮಾನವ ||
ತೊರೆದು ನಂಬಿಗೆಗೊಡುವರು | ಅದ ನಂಬಿ |
ದರೆ ಸತಿಯರುರೆ ಕೆಡುವರು || ೪ ||

ಮಾನಿನೀಕುಲರನ್ನಳೆ | ಬಿಡು ಬಿಡನು |
ಮಾನಗೊಳದಿರು ನಿನ್ನೊಳೆ ||
ಈ ನಾಡಿನೆನ್ನಂಶವ | ನಿನಗಿತ್ತೆ |
ನೀ ನುಡಿಯ ಹಿಡಿ ಸತ್ಯವ || ೫ || 151 ||

**ಭಾಮಿನಿ**
ಸನಕಭೂಪತಿಯಣುಗನಾತ್ಮಜ |
ನನು ರಣದಿ ಕೆಡಹಿದನ ದರ್ಪವ |
ಘನದಿ ಮುರಿದವನರಸಿಯಯ್ಯನ ಪೆಸರಹುದು ನಿನಗೆ ||
ಜನಿಸುವರ್ಭಕರಿಂದ ಮುಂದವ |
ರನು ಸಲಹಿ ತನ್ನಿಚ್ಛೆಯಿಂದದಿ |
ನಿನಗೆ ನಡೆಯಲಸಾಧ್ಯ ಬಿಡು ಸಾರಿದೆನು ಪಿಂತೆರಳು || ೧ || 152 ||

**ಸೌರಾಷ್ಟ್ರ - ತ್ರಿವುಡೆ**
ಬಿಡು ಬಿಡಿನ್ನಬುಜಾಕ್ಷಿ ಸಂಶಯ |
ವಿಡದಿರೆಲೆ ನಿನ್ನಿಷ್ಟದಂದದಿ |
ನಡೆವೆನೆಂದಿಗು ತಪ್ಪೆ ನಂಬಿಗೆ | ಗೊಡುವೆನಿದಕೊ || ೧ ||

ಅಗ್ರಜಾನುಜರೆನ್ನ ತೊರೆದರು |
ಶೀಘ್ರದಿಂದಾರ್ಧಾಂಗಿಯಗಲೆ ಸ |
ಮಗ್ರವನು ನಿನಗಾಗಿ ಗಣಿಸೆ ಪ | ರಿಗ್ರಹಿಸು ನೀ || ೨ ||

ಎಂದು ನಂಬುಗೆಗೊಡುತಲಾಗ ಪು |
ರಂದರಾತ್ಮಜನವಳ ಕೂಡುತ |
ಚಂದದಿಂದಿರುತಿರ್ದ ಕೇಳು ವ | ಸುಂಧರೇಶ || ೩ || 155 ||

**ಕಾಂಭೋದಿ - ಝಂಪೆ**
ದಂತಿಪುರದರಸ ಕೇ | ಳಿಂತು ಫಲುಗುಣನವಳ |
ಕಾಂತಾರದೊಳಗೆ ಜೊತೆಗೂಡಿ ||
ಸಂತಸದೊಳಿರ್ದನಿ | ನ್ನೆಂತೊ ಹರಿಮಾಯೆಯವ |
ಳಿಂತೊರೆದಳಾಗ ಪಾರ್ಥನೊಳು || ೧ ||

ಏನಯ್ಯ ನಿನ್ನ ಬಹು | ಮಾನವಿರಲೆನಗೀಗ |
ಸ್ನಾನಕೋಸುಗ ನೀರ ಕುದಿಸಿ ||
ವೈನದಿಂ ತೈಲವನು ಪೂಸಿ ವಸನವನೊಗೆದು |
ಸಾನುಕೂಲತೆಗೊಳಿಸು ಜವದಿ || ೨ ||

ಎಂದು ದಿನ ದಿನದಿ ಪೀಡಿಸುತ ಸೌಕರ್ಯವವ |
ನಿಂದ ಮಾಡಿಸಿಕೊಳುತ ಸುಖದಿ ||
ಮಂದಗಾಮಿನಿ ಇರಲು ಜನಿಸಿದರು ಹಲವಾರು |
ಕಂದರೇನೆಂಬೆ ವಿಸ್ಮಯವ || ೩ || 158 ||

**ವಾರ್ಧಕ**

ಜನಿಸಿದರ್ಭಕರಿಂಗೆ ಬೇಕಾದ ಪಾಲ್ಬೆಣ್ಣೆ |
ತಿನಿಸುಗಳ ತಂದಿತ್ತು ಸಲಹುತ್ತ ಮೋಹದಿಂ |
ವನಿತೆಯನು ಮನವಲಿಸುತವಳಿಚ್ಛೆಗೆಡರಾಗದಂತವಳೊಳಿರಕವಾಗಿ ||
ಅನಿಮಿಷಾಧಿಪನಣುಗ ತ್ರೈಲೋಕವಿಜಯನೆಂ |
ದೆನಿಪ ಘನ ಖ್ಯಾತಿಯನ್ನುಳಿದು ತನ್ನಂ ಮರೆತು |
ಇನಿತು ಮಾಯೆಗೆ ಸಿಲುಕಿ ಭ್ರಮೆಗೊಂಡು ಮರುಳಾದನೆನಿತೊ ಮುರಹರನ ಲೀಲೆ || ೧ || 159 ||

**ಭಾಮಿನಿ**

ಮಂದಗಾಮಿನಿಯೊಂದು ದಿನ ನಿಜ |
ಕಂದರನು ನೋಡೆಂದು ನರನೊಡ |
ನಂದು ಬಿಟ್ಟಡಗಿರಲು ಬಳಿಕಾ ತರಳರೊಂದಾಗಿ ||
ತಂದೆ ಕೊಡು ತಿನಿಸುಗಳ ಹಸಿವಹು |
ದೆಂದು ಹಲವಂಗದಲಿ ಪೀಡಿಸ |
ಲಂದು ನರ ಕಂಗೆಡುತ ಯೋಚಿಸಿ ತನ್ನೊಳಿಂತೆಂದ || ೧ || 160 ||

**ಕಾಪಿ - ಅಷ್ಟ**

ಸಾಕು ಸಂಸಾರ ಗೋಳಾಟ | ಇದ |
ನ್ಯಾಕೆ ನಿರ್ಮಿಸಿದನೊ ಹರಿ ಮಾಯಾಕಾಟ || ಸಾಕು ಸಂಸಾರ || ಪ ||
ವನಿತೆಮೋಹಕೆ ಮರುಳಾಗಿ | ತನ್ನ |
ಘನ ಭೋಗ ಭಾಗ್ಯ ಸಂಪದವೆಲ್ಲ ನೀಗಿ ||
ಇನಿತು ಕಷ್ಟಕೆ ಗುರಿಯಾಗಿ | ಲಜ್ಜೆ |
ಯನು ತೊರೆದವಳ ಸ್ನೇಹಕೆ ಭಾಗಿಯಾಗಿ || ಸಾಕು || ೧ ||

ಗಂಡು ತಾನೆಂಬುದ ಮರೆತು | ಭ್ರಮೆ |
ಗೊಂಡವಳಿಷ್ಟ ಪಾಲಿಪೆನೆಂದು ಬೆರೆತು ||
ಲಂಡ ಬಾಳ್ವಿಕೆಯಿಂದ ಕಲೆತು | ಈರ್ಷೆ |
ಷಂಡ ಜೀವನಕಿಂತ ಮರಣವೆ ಒಳಿತು || ಸಾಕು || ೨ ||

ಕೆಟ್ಟೆ ನಾನಿವಳೊಶವಾಗಿ | ಎನ್ನ |
ಪಟ್ಟಣ ಸತಿ ಸುತಾಗ್ರಜರೆಲ್ಲ ನೀಗಿ ||
ಇಷ್ಟು ಮಕ್ಕಳು ಪುಟ್ಟಲಾಗಿ | ಇನ್ನು |
ಹೊಟ್ಟೆ ಹೊರೆವುದೆಂತೀ ವನದಿ ಲೇಸಾಗಿ || ಸಾಕು || ೩ || 163 ||

**ಭಾಮಿನಿ**

ಇನಿತು ಫಲುಗುಣನೆಣಿಸಿ ತನ್ನಯ |
ಮನದಿ ವೈರಾಗ್ಯವನು ತಾಳುತ |
ತನಯರುಪಟಳವಾನಲಾರದೆ ಬೈದು ಹೊಡೆದಟ್ಟಿ ||
ಅಣುಗರತಿ ಬೊಬ್ಬಾಟವೆಸಗುತ |
ಜನನಿಯೆಡೆಗೋಡುತಿರೆ ಕಂಡಾ |
ವನಜಮುಖಿ ಗರ್ಜಿಸುತಲೈತಂದೊರೆದಳರ್ಜುನಗೆ || ೧ || 164 ||

**ಸೌರಾಷ್ಟ್ರ - ತ್ರಿವುಡೆ**

ಏನಿದೇನೈ ನರನೆ ನಿನ್ನಭಿ |
ಮಾನ ಸುಡು ಸುಡು ತರಳರನು ಹೊಡೆ |
ದೇನು ಕಾರಣವಟ್ಟಿದೆಯ ಗುಣ | ಹೀನನಾಗಿ || ೧ ||

ಪೇಳಲಿಲ್ಲವೆ ಮೊದಲು ನಿನ್ನನು |
ಕೂಲತೆಯ ನೀನರಿಯದೆನ್ನನು |
ಪಾಳುಗೆಡಹಲು ಬಿಡುವೆನೇ ಕೊಡು | ಕೂಳನೆಮಗೆ || ೨ ||

ಮಡದಿ ಮಕ್ಕಳ ಪೊರೆಯಲಾರದ |
ಜಡ ತಿರುಕ ನಿನಗ್ಯಾಕೆ ಸತಿ ಸುತ |
ರಡವಿಗಟ್ಟುವ ಮನವೆ ಬಿಡೆನೆನೆ | ನುಡಿದ ನರನು || ೩ ||

ಸ್ವೈರಿಸಂಬುಜನಯನೆ ಗಜಪುರ |
ಸೇರಿ ಸುಖಿಸುವೆ ನಿಮ್ಮನೆಂದಿಗು |
ಮೀರೆನಾಡಿದ ನುಡಿಯ ಸುಮ್ಮನೆ | ದೂರಬೇಡ || ೪ ||

ಬಲ್ಲೆ ಗಜಪುರದೆಡೆಗೆ ನಮ್ಮನು |
ಕೊಲ್ಲಲೊಯ್ವೆಯ ನಿನ್ನ ರಾಜ್ಯವ |
ನೆಲ್ಲವೆನಗಿತ್ತಾದಮೇಲೆ | ನ್ನೆಲ್ಲಿ ನಿನಗೆ || ೫ || 169 ||

**ನಾದನಾಮಕ್ರಿಯೆ - ಅಷ್ಟ**
ಎಂದಾ ಕಾಮಿನಿ ಹಲವಂಗದಿ | ಶಕ್ರ |
ನಂದನಗೆನೆ ಮಾನಭಂಗದಿ ||
ನೊಂದು ಬಾಯಾರಿ ಬೆಂಡಾಗುತ್ತ | ಶ್ರೀ ಗೋ |
ವಿಂದನೆ ಗತಿಯೆಂದು ಮರುಗುತ್ತ || ೧ ||

ಜಡಜಲೋಚನೆ ತಾಳು ಎನ್ನಯ | ಅಂಶ |
ಪೊಡವಿಯು ನಿನಗಾಗೆ ಚಿನ್ಮಯ ||
ಬಿಡನೆನ್ನ ನಂಬಿಹೆನಾತನ | ಭಾಷೆ |
ನಡಸಿ ತೋರುವೆ ಲಕ್ಷ್ಮೀನಾಥನ || ೨ ||

ತೋರು ತೋರೆಲೊ ಹರಿಪಾದವ | ನೋಡಿ |
ಸೇರುವೆ ಪೊರೆವ ರಮಾಧವ ||
ತೀರದನ್ಯಥ ಬಿಡೆ ನೋಡೆಂದು | ತೋರ್ದ |
ಳಾರುಭಟಿಸಿ ಘೋರಾಕೃತಿಯಂದು || ೩ || 172 ||

**ಮಾರವಿ - ಏಕ**
ನಾರಿಯು ಘೋರಾ | ಕಾರವ ತಾಳುತ |
ತೋರು ಹರಿಯನೆಂ | ದಾರುಭಟಿಸುತಿರೆ |
ವೀರ ನರನು ಬಾ | ಯಾರಿ ಬೆದರಿ ಹೆ |
ಮ್ಮಾರಿ ಹೊರತು ಸುರ | ನಾರಿಯಲ್ಲೆನುತ || ಓಡುತಿರ್ದ || ೧ ||

ತಡೆ ತಡೆ ನಿಲು ನಿ | ಲ್ಲಡಿಯಿಡದಿರು ಮುಂ |
ದಡಗೆಡಹುವೆ ತವ | ಹುಡುಗರನೆಲ್ಲರ |
ಬಿಡದಿವರನು ಪೊರೆ | ಯಡಗಿದರೆಲ್ಲಿಯು |
ಬಿಡೆನೆನುತಟ್ಟಲು | ಕಡು ರಭಸದಲಿ || ರೋಷದಿಂದ || ೨ ||

ತರುಣಿಯೆ ತಾಳಿ | ನ್ನರುಹುವೆ ಹಸ್ತಿನ |
ಪುರಕೈದುವೆ ನೀ | ಬರಲಲ್ಲಿಗೆ ಶ್ರೀ |
ಹರಿಯನು ತೋರುವೆ | ಬರಿದೆ ವೃಥಾ ಗೋ |
ಳುರಿಸದಿರೆನ್ನುತ | ಮುರಿದೋಡಿದನು || ಭೀತಿಯಿಂದ || ೩ || 175 ||

**ಭಾಮಿನಿ**
ಇಂತರುಹುತಲಿ ಫಲುಗುಣನು ನಿಜ |
ದಂತಿಪುರದೆಡೆಗಾಗಿ ಬರುತಿರೆ |
ಕಾಂತೆ ಬೆನ್ನಟ್ಟಿದಳು ನಿಜರೂಪಾಂತು ಗರ್ಜಿಸುತ ||
ಮುಂತೆ ನರನವನೊಡನೆ ಪಿಂದಕೆ |
ದಂತಿಗಾಮಿನಿ ಸಹಿತ ನಡೆತಂ |
ದಂತಕಾತ್ಮಜಗೆರಗಲೆತ್ತುತಲನುಜಗಿಂತೆಂದ || ೧ || 176 ||

**ಮಧುಮಾಧವಿ - ತ್ರಿವುಡೆ**
ಬಂದೆಯೇನೈ ತಮ್ಮ ತುರಗವ |
ನಂದು ನೀನಡರಿರ್ದುದೆತ್ತಲು |
ಹೊಂದಿತೆಂಬುದನರಿಯದತಿ ಮನ |
ನೊಂದು ಯೋಚಿಸುತಿರ್ದೆನು || ೧ ||

ಮುರಮಥನ ದಯದಿಂದ ಪಿಂದಕೆ |
ಬರಿಸಿದನು ಸಂತೋಷವಾದುದು |
ತರುಣಿ ಯಾರಿವಳೆಲ್ಲಿ ದೊರಕಿದ |
ಳರುಹು ವಿವರದೊಳೆಲ್ಲವ || ೨ || 178 ||

**ವಾರ್ಧಕ**
ಎಂದೆನಲು ನುಡಿದನಗ್ರಜ ಕೇಳು ವಾಜಿಯದ |
ನಂದೇರಿದೊಡನೆ ಗಗನಾಂಗಣದಿ ಬಿಗಿದೆನ್ನ |
ತಂದು ಕಾಂತಾರದೊಳ್ ಕೆಡಹೆ ಬಸವಳಿದಿರಲು ಮಂದಗಾಮಿನಿ ಈಕೆಯು ||
ಬಂದವಳ ನೋಡಿ ಭ್ರಮೆಗೊಂಡಿವಳು ಪೇಳ್ದ ತೆರ |
ದಿಂದ ನಂಬುಗೆಗೊಟ್ಟು ಕೂಡಿರಲ್ಕಿವಳುದರ |
ದಿಂದ ಸುತರುದಿಸೆ ಕಂಗೆಡುತ ಸಂಸಾರದಿಂ ಬೆಂದು ಬೇಗುದಿಗೊಂಡೆನು || ೧ || 179 ||

**ಭಾಮಿನಿ**
ಶ್ರೀಲಲಾಮನೆ ಗತಿಯೆನುತ ಭಯ |
ತಾಳಿರಲ್ಕಿವಳೆನ್ನ ಬಿಡದತಿ |
ಗೋಳುಗುಡಿಸುತ ಹರಿಯ ತೋರೆನುತೆನ್ನ ಬೆನ್ನಟ್ಟಿ ||
ಬಾಲೆ ಬಂದಿಹಳಿವಳಿಗಾ ಶ್ರೀ |
ಲೋಲದರ್ಶನವಾಗದಿರೆ ಬಿಡ |
ಳೀ ಲತಾಂಗಿಯೆನಲ್ಕೆ ಧರ್ಮಜ ಹರಿಯ ಧ್ಯಾನಿಸಿದ || ೧ || 180 ||

**ಪುನ್ನಾಗ ತೋಡಿ - ಅಷ್ಟ**
ಪಾಹಿ ಶ್ರೀಪದ್ಮನಾಭ | ದುರ್ಜನರ ಸ |
ಮೂಹಕದಳಿಮತ್ತೇಭ ||
ಪಾಹಿ ಪಂಕಜನಯನ ವಿನತಜ |
ವಾಹನಾಂಬುಧಿಶಯನ ಸುಮನಸ |
ವಾಹಿನೀನುತಚರಣ ಭುವನಸು |
ಮೋಹನಾತ್ಮಕ ಮುನಿಜನಾನತ || ಪಾಹಿ || ೧ ||

ಹರಿ ಮುರಾಂತಕ ಮುಕುಂದ | ಬಂಧನ ಪರಿ |
ಹರಿಸೋ ನಂಬಿದೆ ಗೋವಿಂದ ||
ಹರಿಣಲೋಚನೆಗಾಗಿ ನರ ತರ |
ಹರಿಸುತಿಹ ಬಂದೀಗ ಭಯ ಪರಿ |
ಹರಿಸಿ ನಮ್ಮನು ಸಲಹಿ ಕರುಣವ |
ಹರಿಸು ನಿತ್ಯಾನಂದ ಮಹಿಮನೆ || ಪಾಹಿ || ೨ || 182 ||

**ಭಾಮಿನಿ**
ಇಳೆಯರಸ ಕೇಳಿಂತು ಧರ್ಮಜ |
ನಳಲು ಕೇಳಿಸಿತಿಂದಿರಾಪತಿ |
ಗೊಳಗೊಳಗೆ ನಸುನಗುತ ಗರುಡನನೇರಿ ವಹಿಲದಲಿ ||
ಘಳಿಲನೈತರೆ ಕಂಡು ಧರ್ಮಜ |
ನುಳಿದ ಸಹಜರು ಸಹಿತ ವಂದಿಸೆ |
ತಲೆ ನೆಗಹಿ ತಕ್ಕೈಸಿ ಯಮಜನೊಳೆಂದನಸುರಾರಿ || ೧ || 183 ||

**ಕಾಪಿ - ಅಷ್ಟ**
ಕೊರತೆಯೇನಾದುದೈ ಭೂಪ | ನಿನ್ನ |
ದೊರೆತನಕಾರಿಂದ ಬಂತು ಸಂತಾಪ ||
ನರ ಮರುತಜರೊಂದಾಗಿಹರೇ | ಪೇಳ್ದ |
ತೆರನಾಳ್ವಿಕೆಯೊಳೊಪ್ಪಿದಾಜ್ಞೆಯಂತಿಹರೆ || ೧ ||

ಎನಲೆಂದ ಹರಿ ನಿನ್ನಾಣತಿಯ | ಪೇಳ |
ಲನಿಲಜಾರ್ಜುನರೊಪ್ಪದಿಳೆಯ ಹಸುಗೆಯ ||
ತನಗೀಯಬೇಕೆಂದು ಯೆನ್ನ | ಪೀಡಿ |
ಪನಕ ತಾಳಿಸಿದನು ಸುರಮುನಿ ರನ್ನ || ೨ ||

ಈಗಳೀ ಫಲುಗುಣ ವನದಿ | ತೋರ್ಪೀ |
ನಾಗವೇಣಿಯ ಮೋಹಕೊಳಗಾಗಿ ಘನದಿ ||
ಬೇಗೆಗೊಂಡಿಲ್ಲಿಗೈತಂದು | ನಿನ್ನ |
ನೀಗಬಲೆಗೆ ತೋರೆ ನೆನೆಸಿದೆನಿಂದು || ೩ || 186 ||

**ವಾರ್ಧಕ**
ಎಂದಾ ಯುಧಿಷ್ಠಿರನ ನುಡಿಗೆ ನಸುನಗುತಲಾ |
ಇಂದಿರೇಶಂ ಕಾಮಿನಿಯ ಕರೆದು ಸಂತವಿಸೆ |
ಸಂದಿತೆನ್ನಿಚ್ಛೆ ಕೈಗೂಡಿತೆನುತಪ್ಪಣೆಯ ಕೊಂಡು ನಿಜಗತಿಗೈದಲು ||
ಮಂದರಧರಂ ಭೀಮ ಫಲುಗುಣರ ಕರೆದವರೊ |
ಳೆಂದ ನಿಮ್ಮಂಶ ಧರಣಿಯದೆಲ್ಲಿ ತೋರಿ ಬರಿ |
ಗೊಂದಲವಿದೇಕೆ ಸರಿಹಸುಗೆಯಂ ಮಾಳ್ಪೆನೆನೆ ಮರುತಸುತನಿಂತೆಂದನು || ೧ || 187 ||

**ಭಾಮಿನಿ**
ದೇವ ಲಾಲಿಪುದೋರ್ವ ಗಾರುಡಿ |
ಹಾವ ತರಲದ ನೆಗಹಲಾರದೆ |
ನಾ ವಸುಧೆಯಂಶವನು ಪಣಕಿಡೆ ಗೆಲಿದ ನಕುಲಾಂಕ ||
ಈ ವಿಧದಿಯೆನ್ನಂಶದವನಿಯ |
ಲಾವ ಹಕ್ಕಿಲ್ಲೆನಲು ಫಲುಗುಣ |
ನೀ ವನಿತೆಗೆನ್ನಂಶವಿತ್ತತಿನಿರ್ಗತಿಕನೆಂದ || ೧ || 188 ||

**ಸುರುಟಿ - ಏಕ**
ಭಳಿರೆ ಪರಾಕ್ರಮರು | ನೀವಿಳೆ |
ಯೊಳಗತಿ ವಿಕ್ರಮರು ||
ಗಳಿಸುವ ಮೊದಲೇ | ಕಳೆದಿರಿ ಭೂಮಿಯ |
ತೊಲಗಿರಿ ಗಜಪುರ | ದೊಳು ಹಕ್ಕಿಲ್ಲವು || ೧ ||

ಅಣ್ಣನ ಕೂಡಿಹುದು | ನಿಮ್ಮಯ |
ಬಣ್ಣಕೆ ಸರಿಬರದು ||
ಇನ್ನಾಲೋಚಿಸ | ಲೇನಹುದೀರ್ವರು |
ಮಿಣ್ಣನೆ ಪೊರಡುವು | ದುಚಿತವು ಗುಪಿತದಿ || ೨ ||

ತಮಗಿದಿರಾರೆನುತ | ಗರ್ವದಿ |
ಯಮಜನೊಳ್ ವಾದಿಸುತ ||
ಕ್ಷಮೆಯಧಿಕಾರವ | ಕೇಳ್ವಂತಾದಿರೆ |
ಸಮವಾಯಿತು ಈ | ಗಮಮ ಶಭಾಸುರೆ || ೩ || 191 ||

**ಮಧುಮಾಧವಿ - ಏಕ**
ದೇವರ ದೇವ ತಪ್ಪಾದುದೆಮ್ಮಿಂದ |
ಕಾವುದಾನತಬಂಧು ನೀನೆ ಗೋವಿಂದ ||
ಈ ವಸುಧೆಯ ಭಾಗವೆಮ್ಮದಿಂತಾಯ್ತು |
ನಾವಗ್ರಭವನೊಳ್ ವಾದಿಸೆ ವ್ಯರ್ಥವಾಯ್ತು || ೧ ||

ಅಣ್ಣ ನಮಗೆ ಜ್ಯೇಷ್ಠನೆಂಬುದ ಮರೆತು |
ಮಿಣ್ಣನೆ ಬೇರಿಹುದೊಳಿತೆಂದು ಬೆರೆತು ||
ಇನ್ನಿನಿತಾಗೆ ಸೇರುವದಾರ ಮರೆಯ |
ಎಣ್ಣದನ್ಯಥ ಭೇದ ಪೊರೆ ವಸುಂಧರೆಯ || ೨ ||

ಎಂದನಿಲಜಪಾರ್ಥರಡಿಗಡಿಗೆರಗಿ |
ತಂದೆಯೆಮ್ಮಪರಾಧ ಕ್ಷಮಿಸೆಂದು ಮರುಗಿ ||
ನಿಂದಿರೆ ನಾಚಿ ಗೋವಿಂದನು ನಗುತ |
ಎಂದನೀ ಪರಿಯವರನು ಸಂತವಿಸುತ || ೩ || 194 ||

**ಸಾಂಗತ್ಯ - ರೂಪಕ**
ಕೇಳಿರೈ ಮರುಗದಿರೇಳಿ ನಿಮ್ಮಯ ಗರ್ವ |
ದೇಳಿಗೆ ಘನವಾಗಿ ಧರೆಯ ||
ಕೇಳುವ ಮನವಾಗಿ ಬರಿದೆ ಧರ್ಮಜನನ್ನು |
ಗೋಳುಗುಟ್ಟಿಸುವಿಚ್ಛೆಯಾಯ್ತು || ೧ ||

ಆದರಿಂದ ನಿಮ್ಮಯ ಮದವಿಳಿಸಲ್ಕಿಷ್ಟು |
ಸದುಪಾಯಗೈದೆ ನೀವಿನ್ನು ||
ಬೆದರದಿರಣ್ಣನಾಜ್ಞೆಯ ತೆರನಿರಲೇಕ |
ತ್ವದಿ ಸುಖವಹುದು ಮುಂದಿನ್ನು || ೨ ||

ನಾನೇ ಗಾರುಡಿ ಬಲದೇವನೆ ಉರಗ ಮ |
ತ್ತಾ ನಾಗಾರಿಯೆ ವಾಜಿಯಾಗಿ ||
ಕಾನನದೊಳು ಸಿಕ್ಕಿದಾ ನಿತಂಬಿನಿ ಮಾಯೆ |
ಈ ನಾಟಕವಗೈದೆನಿದಕೆ || ೩ ||

ಎಂದನಿಲಜಪಾರ್ಥರನು ಸಂತವಿಸುತಲಾ |
ನಂದದಿ ಧರ್ಮಜನೊಡನೆ ||
ಇಂದಿವರಪರಾಧ ಮರೆತು ಪಾಲಿಪುದೆಂದು |
ಇಂದಿರಾಧವ ಕೈವರ್ತಿಸಿದ || ೪ || 198 ||

**ಭಾಮಿನಿ**
ಅರಸ ಕೇಳೀ ತೆರದಿ ಮುರಹರ |
ಮರುತಸಂಭವ ಪಾರ್ಥರಿಬ್ಬರ |
ಗರುವವನು ಮುರಿದೊಂದುಗೂಡಿಸಿ ಪಾಂಡುನಂದನರ ||
ಪೊರೆವ ಬಿರುದನು ವಹಿಸಿ ಧರ್ಮಜ |
ಗರುಹಿ ಸಂತೈಸುತ್ತ ದ್ವಾರಕಿ |
ಪುರಕೆ ಬಂದಾನಂದನಿಧಿ ಶೋಭಿಸಿದ ನಲವಿನಲಿ || ೧ || 199 ||

**ವಾರ್ಧಕ**
ಇಳೆಯರಸಜನಮೇಜಯಂಗೆ ವೈಶಂಪಾಯ |
ತಿಳುಹಿದಂತೀ ಚಲಚ್ಚಿತ್ರದೊಳಗಿಹ ಕಥೆಯ |
ಸುಲಲಿತದ ಕನ್ನಡದೊಳೆಕ್ಷಗಾನದಿ ಗೆಯ್ಯಲೊಳಿತಪ್ಪುದೆಂದೆನ್ನೊಳು ||
ತಿಳಿಸೆ ಸನ್ಮಿತ್ರರೀ ಕೃತಿ ಗೈದೆ ಶಿರಿಪುರದೊ |
ಳಿಳೆಯಮರಕುಲಜ ದೇವಪ್ಪಯ್ಯನಾತ್ಮಜಂ |
ನಳಿನಾಕ್ಷದಯದಿ ಫಣಿಯಪ್ಪಯ್ಯನೆಂಬವಂ ಯಕ್ಷಗಾನದೊಳಿದರನು || ೧ || 200 ||

**ಮಂಗಲ**
ಮಂಗಲಂ ಮಾಧವಗೆ ಮಧುಕೈಟಭಾಂತಕಗೆ |
ಮಂಗಲಂ ನಿಖಿಲಲೋಕಾಧೀಶಗೆ ||
ಮಂಗಲಂ ಪಾಂಡುನಂದನರ ಪಾಲಕಗೆ ಜಯ |
ಮಂಗಲಂ ದೈತ್ಯಮರ್ದನ ದೇವಗೆ ||
ಜಯ ಮಂಗಲಂ ಸದಾ ಶುಭಮಂಗಲಂ || ೧ ||

ಮಾರನಯ್ಯಗೆ ಜಗದೋದ್ಧಾರನಿಗೆ ನಿರ್ಮಲಗೆ |
ವೀರ ಶಿಶುಪಾಲಾದಿ ಖಳನಾಶಗೆ ||
ಮಾರಾರಿಮಿತ್ರನಿಗೆ ಮೂಜಗಪವಿತ್ರನಿಗೆ |
ಕ್ಷೀರಾಬ್ಧಿವಾಸ ಭವನಾಶ ಹರಿಗೆ || ಜಯ ಮಂಗಲಂ || ೨ ||

ದೋಷನಾಶಗೆ ಕೃಪಾರಾಶಿ ಮುನಿಜನಭಕ್ತ |
ಪೋಷಕಗೆ ವಿಮಲರವಿಭಾಸಾತ್ಮಗೆ ||
ಶ್ರೀ ಸಕಲವಂದ್ಯ ಜಗದೀಶ ಸಿರಿಪುರದಿಯಲ |
ಗೇಶಸಖನಹ ವೇಂಕಟೇಶ ದೊರೆಗೆ ||
ಜಯ ಮಂಗಲಂ ಸದಾ ಶುಭ ಮಂಗಲಂ || ೩ || 203 ||

*****ಶುಭಂ*****

# ಕೃತಜ್ಞತೆಗಳು

**ಅಂತರಜಾಲ ಪ್ರಕಾಶನ ಪ್ರಾಯೋಜಕರು:** ಕರ್ನಾಟಕ ಯಕ್ಷಗಾನ ಅಕಾಡೆಮಿ, ಕರ್ನಾಟಕ ಸರ್ಕಾರ

**ಮೂಲ ಪ್ರಕಾಶಕರು:** ಪಾವಂಜೆ ಗುರುರಾವ್ ಅಂಡ್ ಸನ್ಸ್

**ಪ್ರಸಂಗ ಪ್ರತಿ ಆಧಾರ:** ಪಾವಂಜೆ ಗುರುರಾವ್ ಅಂಡ್ ಸನ್ಸ್ ಪ್ರಕಟಿತ ಕೃತಿ

**ಪ್ರಸಂಗ ಪ್ರತಿ ಕೊಟ್ಟವರು:** ಉಮೇಶ್ ಶಿರೂರು

**ಪ್ರಸಂಗ ಪ್ರತಿ ಒದಗಣೆಗೆ ಸಹಕಾರ:** ರವಿ ಮಡೋಡಿ

**ಅಂತರಜಾಲ ಪ್ರತಿ ಬರವಣಿಗೆ:** ರಂಜನ ಭಟ್

**ಅಂತರಜಾಲ ಪ್ರತಿ ವಿನ್ಯಾಸ:** ರವಿ ಮಡೋಡಿ

**ಅಂತರಜಾಲ ಪ್ರತಿ ತಿದ್ದುಪಡಿ:** ಶ್ರೀಧರ ಡಿ. ಎಸ್., ಗಿಂಡೀಮನೆ ಮೃತ್ಯುಂಜಯ, ಅಶೋಕ ಮುಂಗಳೀಮನೆ, ದಿನೇಶ್ ಉಪ್ಪೂರ

**ಅಂತರಜಾಲ ಪ್ರತಿ ಉತ್ಪಾದನೆ ಮತ್ತು ಪ್ರಕಾಶನ:** ರವಿ ಮಡೋಡಿ, ನಟರಾಜ ಉಪಾಧ್ಯ, ಅಶ್ವಿನಿ ಹೊದಲ